RNI No. **KARBIL/2001/47147**

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೯ Volume 149	ಬೆಂಗಳೂರು, ಗುರುವಾರ, ಜನವರಿ ೨, ೨೦೧೪ (ಪುಷ್ಯ ೧೨, ಶಕ ವರ್ಷ ೧೯೩೫) Bangalore, Thursday, January 2, 2014 (Pushya 12, Shaka Varsha 1935)	ಸಂಚಿಕೆ ೧ Issue 1

ಭಾಗ ೩

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560001.

ಅಧಿಸೂಚನೆ

ಸಂಖ್ಯೆ:ಇಪ(1)953/2013–14/ಪಿಎಸ್‌ಸಿ., ದಿನಾಂಕ: 12–12–2013.

ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಪರೀಕ್ಷೆ ನಡೆಸುವಿಕೆ) ನಿಯಮಗಳು, 1965 ಮತ್ತು ಕರ್ನಾಟಕ ನಾಗರಿಕ ಸೇವಾ (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆ) ನಿಯಮಗಳು, 1974ರ ಮೇರೆಗೆ ಆಯೋಗವು **2013ನೇ ಸಾಲಿನ ದ್ವಿತೀಯ** ಅಧಿವೇಶನದ ಇಲಾಖಾ ಪರೀಕ್ಷೆಗಳನ್ನು ನಡೆಸಲು ಕರ್ನಾಟಕ ನಾಗರಿಕ ಸೇವಾ ನಿಯಮಗಳಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಈ ಬಗ್ಗೆ ಸೂಚನೆಗಳನ್ನು ಆಯೋಗದ ವೆಬ್‌ಸೈಟ್ “**http://kpsc.kar.nic.in**”ನಲ್ಲಿ ಬಿತ್ತರಿಸಲಾಗಿದೆ. ಈ ಪರೀಕ್ಷೆಗಳನ್ನು 2014ರ **ಫೆಬ್ರವರಿ/ಮಾರ್ಚ್** ಮಾಹೆಯಲ್ಲಿ ನಡೆಸಲಾಗುವುದು.

ಈ ಅಧಿಸೂಚನೆಯ ಅನುಬಂಧ–‘ಎ’ ಯಲ್ಲಿನ ಪರೀಕ್ಷಾ ವೇಳಾಪಟ್ಟಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುವ ಪರೀಕ್ಷೆಗಳ ಬಗ್ಗೆ ವಿವರಗಳನ್ನು ನೀಡಲಾಗಿದೆ. ಅನುಬಂಧ–**‘ಬಿ’** ನಲ್ಲಿ ಬೆಂಗಳೂರು ಕೇಂದ್ರದಲ್ಲಿ ಮಾತ್ರ ನಡೆಯುವ ಪರೀಕ್ಷೆಗಳ ಬಗ್ಗೆ ವಿವರಗಳನ್ನು ನೀಡಲಾಗಿದೆ.

ಪರೀಕ್ಷೆಗೆ ಹಾಜರಾಗಬಯಸುವ ಅಭ್ಯರ್ಥಿಗಳು ಒಂದು ಅರ್ಜಿಯಲ್ಲಿ ಗರಿಷ್ಠ ಆರು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡುವಾಗ ವಿಷಯ ಮತ್ತು ವಿಷಯ ಸಂಕೇತಗಳನ್ನು ಎಚ್ಚರಿಕೆಯಿಂದ ಭರ್ತಿ ಮಾಡಲು ಸೂಚಿಸಿದೆ.

1. ಸೂಚನೆಗಳು:

(1) ಇಲಾಖಾ ಪರೀಕ್ಷೆಗಳಿಗೆ ಸ್ಥಳೀಯ ಅಭ್ಯರ್ಥಿಗಳು, ಸ್ಟೈಪೆಂಡರಿ ಪದವೀಧರರು, ದೈನಿಕ ಮುಜರಾಯಿ ಮಾಸಿಕ ವೇತನದ ಮೇಲೆ ಕೆಲಸ ಮಾಡುತ್ತಿರುವ ವ್ಯಕ್ತಿಗಳು, ಕರಾರು ಆಧಾರದಲ್ಲಿ ಹಾಗೂ ಅನುದಾನಿತ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳು ಈ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗುವುದಿಲ್ಲ.

(2) ಇಲಾಖಾ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ನೌಕರರು ತಮ್ಮ ಮೇಲಧಿಕಾರಿಗಳಿಂದ ಲಿಖಿತ ಅನುಮತಿ ಪಡೆದು ಅರ್ಜಿ ಸಲ್ಲಿಸತಕ್ಕದ್ದು. ಆಯೋಗವು ಅಪೇಕ್ಷಿಸಿದ ಸಂದರ್ಭದಲ್ಲಿ ಅಭ್ಯರ್ಥಿಗಳು ಲಿಖಿತ ಅನುಮತಿ ಪತ್ರವನ್ನು ಹಾಜರುಪಡಿಸಲು ಬದ್ಧರಾಗಿರತಕ್ಕದ್ದು.

(3) ಇಲಾಖಾ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಅಭ್ಯರ್ಥಿಯು ಕಡ್ಡಾಯವಾಗಿ ನಿಗದಿಪಡಿಸಿರುವ ಪರೀಕ್ಷಾ ಶುಲ್ಕವನ್ನು ಪಾವತಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

(4) ಶುಲ್ಕ ಪಾವತಿಸದ, ಅಪೂರ್ಣ ಅರ್ಜಿಗಳನ್ನು ಮತ್ತು ಆನ್‌ಲೈನ್ ವಿಧಾನ ಹೊರತುಪಡಿಸಿ ಇತರ ಯಾವುದೇ ವಿಧಾನದಲ್ಲಿ ಸಲ್ಲಿಸಿದ ಅರ್ಜಿಗಳನ್ನು ಯಾವ ಸೂಚನೆಯನ್ನೂ ನೀಡದೇ ತಿರಸ್ಕರಿಸಲಾಗುವುದು.

(5) ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವ ಮುನ್ನ On-line ನಲ್ಲಿ ನೀಡಿರುವ ಸೂಚನೆಗಳನ್ನು ಗಮನಿಸಿ ಈ ಸೂಚನೆಗಳಿಗೆ ಅನುಸಾರವಾಗಿಯೇ ಭರ್ತಿ ಮಾಡತಕ್ಕದ್ದು.

(6) ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅಭ್ಯರ್ಥಿಗಳ ವಿರುದ್ಧ ಆಯೋಗವು ಕಾನೂನಿನನ್ವಯ ಸೂಕ್ತ ಕ್ರಮಕೈಗೊಳ್ಳುವುದು.

(7) ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಶುಲ್ಕವನ್ನು ಸ್ಕ್ಯಾನರ್ ಸೌಲಭ್ಯವಿರುವ ಗಣಕೀಕೃತ ಅಂಚೆ ಕಛೇರಿಯ ರಾಜ್ಯದ ಯಾವುದೇ ಶಾಖೆಯಲ್ಲಿ ಸಂದಾಯ ಮಾಡಬಹುದಾಗಿದ್ದು, ಈ ಬಗ್ಗೆ ಆಯೋಗದ ವೈಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುವ 1713 ಅಂಚೆ ಕಛೇರಿ ಶಾಖೆಗಳ ಪಟ್ಟಿಯನ್ನು ನೋಡತಕ್ಕದ್ದು. ಈ ಅಂಚೆ ಕಛೇರಿಯ ಶಾಖೆಗಳನ್ನು ಹೊರತುಪಡಿಸಿ ಉಳಿದ ಶಾಖೆಗಳಲ್ಲಿ ಅಥವಾ ಇತರೆ ಯಾವುದೇ ರೀತಿಯಲ್ಲಿ ಶುಲ್ಕ ಸಂದಾಯ ಮಾಡಲಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

(8) ಕೊನೆಯ ಕ್ಷಣಗಳಲ್ಲಿ ಎದುರಾಗಬಹುದಾದ ಸಮಸ್ಯೆಗಳಿಂದ ಪಾರಾಗಲು ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ಕಾಯದೇ ಸಾಕಷ್ಟು ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸಲು ಪ್ರಯತ್ನಿಸತಕ್ಕದ್ದು. ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಆಯೋಗವು ನಡೆಸುವ ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

(9) ಅಭ್ಯರ್ಥಿಯು ತನ್ನ ಹುದ್ದೆಗೆ ಸಂಬಂಧಿಸಿದಂತೆ 1974ರ ಕರ್ನಾಟಕ ನಾಗರಿಕ ಸೇವಾ (ಸೇವೆ ಮತ್ತು ಕನ್ನಡಭಾಷಾ ಪರೀಕ್ಷೆ) ನಿಯಮಾವಳಿ ರೀತ್ಯಾ ಷೆಡ್ಯೂಲ್ IIರಲ್ಲಿ ಕಡ್ಡಾಯಗೊಳಿಸಿದ ವಿಷಯಗಳಿಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು ಹಾಗೂ ತನಗೆ ಸಂಬಂಧಪಡದ ಇತರೇ ಇಲಾಖೆಗಳ ವಿಷಯಗಳಲ್ಲಿ ಪರೀಕ್ಷೆ ಬರೆಯಲು ಅರ್ಜಿಯನ್ನು ಯಾವುದೇ ಕಾರಣಕ್ಕೂ ಸಲ್ಲಿಸತಕ್ಕದ್ದಲ್ಲ. ಹಾಗೆಯೇ ಅಭ್ಯರ್ಥಿಯು ತಾನು ಶುಲ್ಕ ಸಂದಾಯ ಮಾಡಿರುವೆನೆಂಬ ಮಾತ್ರಕ್ಕೆ ಪರೀಕ್ಷೆ ಬರೆಯಲು ಹಕ್ಕುಳ್ಳವನಾಗಿರುವನೆಂದು ಭಾವಿಸತಕ್ಕದ್ದಲ್ಲ.

(10) **ಎಸ್.ಎ.ಎಸ್, ವಿಷಯಗಳಿಗೆ ಸಂಬಂಧಿಸಿದಂತೆ ಸೂಚನೆ:** ಕರ್ನಾಟಕ ನಾಗರಿಕ ಸೇವಾ (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆ) ನಿಯಮಗಳು, 1974ರನ್ವಯ ಸಬಾರ್ಡಿನೇಟ್ ಅಕೌಂಟ್ಸ್ ಸರ್ವಿಸ್(ಎಸ್.ಎ.ಎಸ್) ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕಾಗುವ ನೌಕರರು ಪ್ರಥಮ ದರ್ಜೆ/ದ್ವಿತೀಯ ದರ್ಜೆ ಸಹಾಯಕರಾಗಿದ್ದಲ್ಲಿ ಅವರು ಸೇವೆಗೆ ನೇಮಕಗೊಂಡ ದಿನಾಂಕದಿಂದ ಪ್ರಥಮ ದರ್ಜೆ ಸಹಾಯಕರಾಗಿ ಮೂರು ವರ್ಷಗಳಿಗಿಂತ ಕಡಿಮೆ ಇರದ ಅಥವಾ ದ್ವಿತೀಯ ದರ್ಜೆ ಸಹಾಯಕರಾಗಿ ಆರು ವರ್ಷಗಳಿಗಿಂತ ಕಡಿಮೆ ಇರದ ಅವಧಿಯ ಸೇವೆ ಸಲ್ಲಿಸಿದ್ದು ಅಕೌಂಟ್ಸ್ ಹೈಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕಡ್ಡಾಯವಾಗಿ ತೇರ್ಗಡೆಯಾಗಿದ್ದಲ್ಲಿ ಮಾತ್ರ ಸದರಿ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹರಾಗಿರುತ್ತಾರೆ. ಅಂತಹ ಅಭ್ಯರ್ಥಿಗಳು ಅವರ ಸೇವಾ ಅವಧಿಯನ್ನು ಮತ್ತು ಅಕೌಂಟ್ಸ್ ಹೈಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾದ ಬಗ್ಗೆ ವಿವರಗಳನ್ನು ಆನ್‌ಲೈನ್ ಅರ್ಜಿಯ ನಿಗದಿತ ಅಂಕಣದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

(11) ಕೇಂದ್ರ ಪರಿಹಾರ ಸಮಿತಿಯು ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿರುವ ಸಂಸ್ಥೆಯಾಗಿರುವ ಕಾರಣ ಅಲ್ಲಿಯ ಸಿಬ್ಬಂದಿವರ್ಗದವರು ಆಯೋಗವು ನಡೆಸುವ ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಹೈಯರ್, ಅಕೌಂಟ್ಸ್ ಲೋಯರ್, ಜನರಲ್ ಲಾ ಇತ್ಯಾದಿ ಕಡ್ಡಾಯಗೊಳಿಸಲಾದ ಸೇವಾ ಪರೀಕ್ಷೆಗಳಿಗೆ ಹಾಜರಾಗಲು ಅರ್ಹರಾಗುತ್ತಾರೆ.

(12) ಸರ್ಕಾರವು ಇತರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಸಿಬ್ಬಂದಿಗಳಿಗೆ ಇಲಾಖಾ ಪರೀಕ್ಷೆಗಳನ್ನು ನಿಗದಿಪಡಿಸಿ ರಾಜ್ಯಪತ್ರದಲ್ಲಿ ಪ್ರಕಟಿಸಿದಲ್ಲಿ ಅಂತಹವರು ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗುತ್ತಾರೆ.

2. ಅಭ್ಯರ್ಥಿಗಳು ಆನ್‌ಲೈನ್ (On-line) ಮುಖಾಂತರ ಇಲಾಖಾ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ಹಂತಗಳನ್ನು ಅನುಕ್ರಮವಾಗಿ ಈ ಕೆಳಕಂಡಂತೆ ವಿವರಿಸಲಾಗಿದೆ.

ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಮುನ್ನ **35 x 45mm** (ಜೆಪಿಜಿ) ಅಳತೆಯ ತಮ್ಮ ಇತ್ತೀಚಿನ ಭಾವಚಿತ್ರವನ್ನು ಶುದ್ಧವಾದ ಬಿಳಿ ಹಾಳೆಯ ಮೇಲೆ ಅಂಟಿಸಿ ಅದರ ಕೆಳಗೆ ಕಪ್ಪು ಶಾಹಿಯ ಪೆನ್‌ನಲ್ಲಿ ಸಹಿ ಮಾಡಿದ ನಂತರ ಸ್ಕ್ಯಾನ್ ಮಾಡಿ **UPLOAD** ಮಾಡಲು ಸಿದ್ಧವಾಗಿಟ್ಟುಕೊಂಡಿರಬೇಕು.

ಅಭ್ಯರ್ಥಿಗಳು ಆಯೋಗದ ಅಧಿಕೃತ ವೆಬ್‌ಸೈಟ್ **'http://kpsc.kar.nic.in'**ನಲ್ಲಿ **''ONLINE APPLICATION FOR DEPARTMENTAL EXAM-SECOND SESSION 2013''** ಲಿಂಕನ್ನು ಕ್ಲಿಕ್ ಮಾಡಿದ ನಂತರ ಅರ್ಜಿ ಸಲ್ಲಿಸಲು ಬೇಕಾದ ಸೂಚನೆಗಳನ್ನು ವೀಕ್ಷಿಸಲು **'HOME PAGE'**ನಲ್ಲಿನ **'INSTRUCTIONS TO CANDIDATES'** ಎನ್ನುವ ಲಿಂಕನ್ನು ಕ್ಲಿಕ್ ಮಾಡಬೇಕು.

ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು **'SUBMIT APPLICATION FORM'** ಎನ್ನುವ ಲಿಂಕನ್ನು ಕ್ಲಿಕ್ ಮಾಡಬೇಕು. ಅರ್ಜಿಯಲ್ಲಿ ನಿಗದಿತ ವಿವರಗಳನ್ನು ಭರ್ತಿ ಮಾಡಿ, ಸ್ಕ್ಯಾನ್ ಮಾಡಿಕೊಂಡಿರುವ ತಮ್ಮ ಇತ್ತೀಚಿನ ಭಾವಚಿತ್ರವನ್ನು **UPLOAD** ಮಾಡಿದ ನಂತರ **'Preview'** ಐಕಾನ್ ಮೇಲೆ ಕ್ಲಿಕ್ ಮಾಡಿ ಅರ್ಜಿಯಲ್ಲಿ ನಮೂದಿಸಿರುವ ವಿವರಗಳನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸತಕ್ಕದ್ದು. ಈ ಮೊದಲು ನಮೂದಿಸಿರುವ ವಿವರಗಳಲ್ಲಿ ಏನಾದರೂ ತಪ್ಪುಗಳಾಗಿದ್ದಲ್ಲಿ ಅದನ್ನು ಸರಿಪಡಿಸಲು **'Edit'** ಮೇಲೆ ಕ್ಲಿಕ್ ಮಾಡಿ ನಂತರ ಅಗತ್ಯ ತಿದ್ದುಪಡಿಗಳನ್ನು ಮಾಡಬಹುದು. ಆನಂತರ ಅರ್ಜಿಯಲ್ಲಿ ಭರ್ತಿ ಮಾಡಿರುವ ಎಲ್ಲಾ ವಿವರಗಳು ಸರಿಯಾಗಿರುತ್ತವೆ ಎಂಬುದನ್ನು ದೃಢಪಡಿಸಿಕೊಂಡ ನಂತರವೇ, **'Submit'** ಐಕಾನ್ ಅನ್ನು ಕ್ಲಿಕ್ ಮಾಡಬೇಕು. ಆ ನಂತರ ಪರದೆಯ ಮೇಲೆ ಮೂಡುವ **Application ID Number**(ಅರ್ಜಿಯ ಸಂಖ್ಯೆ)ಅನ್ನು ಅಭ್ಯರ್ಥಿಯು ಗುರುತು ಹಾಕಿಕೊಳ್ಳತಕ್ಕದ್ದು. ಮುಂದೆ ಚಲನ್ ಮುದ್ರಿಸಲು ಮತ್ತು ಪ್ರವೇಶ ಪತ್ರವನ್ನು ಪಡೆಯಲು ಅರ್ಜಿ ಸಂಖ್ಯೆಯು ಅವಶ್ಯವಿರುತ್ತದೆ.

ಪರೀಕ್ಷಾ ಶುಲ್ಕವನ್ನು ಪಾವತಿಸಲು ಬೇಕಾದ ಚಲನ್ ಅನ್ನು ಪಡೆಯಲು **'Generate Challan'** ಎನ್ನುವ ಲಿಂಕನ್ನು ಕ್ಲಿಕ್ ಮಾಡಿ ಚಲನ್‌ನ ದ್ವಿಪ್ರತಿಯನ್ನು **down load** ಮಾಡಿಕೊಳ್ಳಬೇಕು. ಡೌನ್‌ಲೋಡ್ ಮಾಡಿಕೊಂಡ ಚಲನ್‌ನಲ್ಲಿ ಬಾರ್‌ಕೋಡ್ ಇದ್ದು, ಅದು ಹಾಳಾಗದಂತೆ ಅಭ್ಯರ್ಥಿಗಳು ಎಚ್ಚರವಹಿಸತಕ್ಕದ್ದು. ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಿ ಚಲನ್ ಅನ್ನು **down load** ಮಾಡಿಕೊಂಡ ತರುವಾಯ ಶುಲ್ಕವನ್ನು ಸ್ಕ್ಯಾನರ್ ಸೌಲಭ್ಯವುಳ್ಳ ಗಣಕೀಕೃತ ಅಂಚೆ ಕಛೇರಿಯ ರಾಜ್ಯದ ಯಾವುದೇ ಶಾಖೆಯಲ್ಲಿ ಸಂದಾಯ ಮಾಡಬಹುದಾಗಿದೆ. ಹೋಬಳಿ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಗಣಕೀಕೃತ ಸೌಲಭ್ಯವಿರುವ ಅಂಚೆ ಕಛೇರಿಯ 1713 ಶಾಖೆಗಳ ಹಾಗೂ ಅಂಚೆ ಕಛೇರಿಗಳು ಕರ್ತವ್ಯ ನಿರ್ವಹಿಸುವ ಕಾಲಾವಧಿಯ ಪಟ್ಟಿಯನ್ನು ಆಯೋಗದ

ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು. **ಶುಲ್ಕವನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಶುಲ್ಕವನ್ನು ಸಂದಾಯ ಮಾಡಲು ಅವಕಾಶವಿರುವುದಿಲ್ಲ. ಅಂಚೆ ಕಛೇರಿಯನ್ನು ಹೊರತುಪಡಿಸಿ ಇತರೆ ಯಾವುದೇ ರೀತಿಯಲ್ಲಿ ಶುಲ್ಕ ಸಂದಾಯ ಮಾಡುವಂತಿಲ್ಲ. ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೇ ತಿರಸ್ಕೃತಗೊಳಿಸಲಾಗುವುದು. ಶುಲ್ಕ ಪಾವತಿಸಿದ ಬಗ್ಗೆ ದೃಢೀಕರಣಗೊಂಡಿರದ ಅಭ್ಯರ್ಥಿಗಳು ಅಂಚೆ ಕಛೇರಿಯ ಸಹಾಯವಾಣಿ (Help Line) ದೂರವಾಣಿ ಸಂಖ್ಯೆ 080–22392599/080–22392600 ಅನ್ನು ಸಂಪರ್ಕಿಸಿ ಸೂಕ್ತ ಮಾಹಿತಿಯನ್ನು ಒದಗಿಸಿ ಶುಲ್ಕ ಪಾವತಿಸಿದ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.**

ಅರ್ಜಿಯ ಪ್ರತಿಯನ್ನು ಮುದ್ರಿಸಿಕೊಳ್ಳಲು ಅಭ್ಯರ್ಥಿಯು **'Print Application'** ಎನ್ನುವ ಲಿಂಕನ್ನು ಕ್ಲಿಕ್ ಮಾಡಬೇಕು. ಅರ್ಜಿಯ ಪ್ರತಿಯನ್ನು ಮತ್ತು ಶುಲ್ಕ ಸಂದಾಯ ಮಾಡಿದ ಚಲನ್ ಹಾಗೂ ಅಂಚೆ ಕಛೇರಿಯವರು ನೀಡಿರುವ ರಸೀದಿಯನ್ನು ಕಡ್ಡಾಯವಾಗಿ ಅಭ್ಯರ್ಥಿಗಳು ತಮ್ಮೊಂದಿಗೆ ಇಟ್ಟುಕೊಳ್ಳತಕ್ಕದ್ದು. ಆಯೋಗವು ಅಪೇಕ್ಷಿಸಿದಾಗ ಈ ಚಲನ್ ಅನ್ನು ಹಾಜರುಪಡಿಸಬೇಕು.

ಅಭ್ಯರ್ಥಿಗಳು ಅರ್ಜಿ ಸಂಖ್ಯೆಯ ಮಾಹಿತಿಯನ್ನು ಪಡೆಯಬೇಕಾದಲ್ಲಿ ಆಯೋಗದ ವೆಬ್‌ಸೈಟ್‌ನ **HOME PAGE** ನಲ್ಲಿನ **'Search application ID'** ಲಿಂಕಿನಲ್ಲಿ ಮಾಹಿತಿಗಳನ್ನು ದಾಖಲಿಸಿ ಅರ್ಜಿ ಸಂಖ್ಯೆಯನ್ನು ಪಡೆಯಬಹುದಾಗಿರುತ್ತದೆ. ಜನ್ಮ ದಿನಾಂಕದ ಮಾಹಿತಿಯನ್ನು ಪಡೆಯಲು **'Search Date of Birth'** ಲಿಂಕಿನಲ್ಲಿ ಅಗತ್ಯ ಮಾಹಿತಿಗಳನ್ನು ದಾಖಲಿಸಿ ಜನ್ಮ ದಿನಾಂಕದ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

➡ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: : **12–12–2013**

➡ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: : **10–01–2014** ಸಂಜೆ **5.30** ಗಂಟೆ ಆಗಿರುತ್ತದೆ.

➡ ಶುಲ್ಕ ಸಂದಾಯ ಮಾಡಲು ಕೊನೆಯ ದಿನಾಂಕ: **: 11–01–2014** ಅಂಚೆ ಕಛೇರಿಯ ವ್ಯವಹಾರ ವೇಳೆಯೊಳಗೆ. (ಮಧ್ಯಾಹ್ನ 3.00ಗಂಟೆ)

ವಿಶೇಷ ಸೂಚನೆ:– ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆಗಳು ಉದ್ಭವಿಸಿದಲ್ಲಿ ಸಹಾಯವಾಣಿ **(Help line)** 080–30574913, 080–30574944 ಮತ್ತು 080–30574945ಗಳನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.

3. ವಿಷಯ, ಸಂಕೇತಗಳು ಮತ್ತು ನಿಗದಿಪಡಿಸಿದ ಶುಲ್ಕ:

ಇಲಾಖಾ ಪರೀಕ್ಷೆಯ ವಿವಿಧ ವಿಷಯಗಳು, ಅವುಗಳ ಸಂಕೇತಗಳು ಹಾಗೂ ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ 6 ಸೇಲೋಸೇ 2010, ದಿನಾಂಕ: **06–08–2010**ರನ್ವಯ ನಿಗದಿಪಡಿಸಿರುವ ಪರಿಷ್ಕೃತ ಶುಲ್ಕಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ವಿವರಿಸಲಾಗಿದೆ.

ವಿಷಯ	**ವಿಷಯ ಸಂಕೇತ**	**ನಿಗದಿಪಡಿಸಲಾದ ಶುಲ್ಕ ರೂ.**
(1)	**(2)**	**(3)**
ಅಕೌಂಟ್ಸ್ ಲೋಯರ್	1	50–00
ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–1	2	50–00
ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–2	3	50–00
ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್	4	50–00
ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್	5	50–00
ಫಾರೆಸ್ಟ್ ಪತ್ರಿಕೆ–1 (ಫಾರೆಸ್ಟ್‌ಗಾರ್ಡ್‌ಗಳಿಗೆ ಮಾತ್ರ)	6	50–00
ಫಾರೆಸ್ಟ್ ಪತ್ರಿಕೆ–2 (ಫಾರೆಸ್ಟ್‌ಗಾರ್ಡ್‌ಗಳಿಗೆ ಮಾತ್ರ)	7	50–00
ಜನರಲ್ ಲಾ ಭಾಗ–2	8	50–00
ಹೋಮ್ ಗಾರ್ಡ್ಸ್ ಮ್ಯಾನ್ಯುಯಲ್	9	50–00
ಆಕ್ಟ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಅಂಡ್ ಚೈಲ್ಡ್ ಡೆವಲಪ್‌ಮೆಂಟ್	10	50–00
ಮೋಟಾರ್ ವೆಹಿಕಲ್ಸ್	11	50–00
ಮೈನಿಂಗ್ ಭಾಗ–1	12	50–00
ಮೈನಿಂಗ್ ಭಾಗ–2	13	50–00
ಪ್ರಿಸನ್ಸ್	14	50–00
ಪೋರ್ಟ್ಸ್ ಹೈಯರ್	15	50–00
ಪೋರ್ಟ್ಸ್ ಲೋಯರ್	16	50–00
ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ–1	17	50–00
ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ–2	18	50–00
ಯೂಥ್ ಸರ್ವೀಸ್ ಮ್ಯಾನ್ಯುಯಲ್	19	50–00
ಎಕ್ಸೈಸ್	20	50–00
ಪೊಲೀಸ್ ಮ್ಯಾನ್ಯುಯಲ್	21	50–00

ವಿಷಯ	ವಿಷಯ ಸಂಕೇತ	ನಿಗದಿಪಡಿಸಲಾದ ಶುಲ್ಕ ರೂ.
ಅಕೌಂಟ್ಸ್ ಹೈಯರ್	22	100–00
ಕಮರ್ಷಿಯಲ್ ಟ್ಯಾಕ್ಸಸ್ ಭಾಗ–2 (ಲೋಯರ್)	23	100–00
ಫಾರೆಸ್ಟ್	24	100–00
ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್	25	100–00
ಲೇಬರ್	26	100–00
ಲೋಕಲ್ ಲಾಸ್ ಆಂಡ್ ಕಮರ್ಷಿಯಲ್ ಬುಕ್ ಕೀಪಿಂಗ್	27	100–00
ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್	28	100–00
ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಲೋಯರ್	29	100–00
ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–1	30	100–00
ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–2	31	100–00
ಪಿ.ಡಬ್ಲ್ಯೂ.ಡಿ. ಲೋಯರ್	32	100–00
ರಿಜಿಸ್ಟ್ರೇಷನ್	33	100–00
ಸಿರಿಕಲ್ಚರ್	34	100–00
ಕೋ–ಆಪರೇಷನ್	35	100–00
ಜನರಲ್ ಲಾ ಭಾಗ–1	36	100–00
ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್	37	100–00
ಮಾರ್ಕೆಟಿಂಗ್	38	100–00
ರೆವಿನ್ಯೂ ಹೈಯರ್ ಭಾಗ–1	39	100–00
ರೆವಿನ್ಯೂ ಹೈಯರ್ ಭಾಗ–2	40	100–00
ರೆವಿನ್ಯೂ ಲೋಯರ್	41	100–00
ಕಮರ್ಷಿಯಲ್ ಟ್ಯಾಕ್ಸಸ್ ಭಾಗ–1 (ಹೈಯರ್)	42	100–00
ಕೋ–ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್	43	100–00
ಇನ್ಸೂರೆನ್ಸ್ ಅಡ್ವಾನ್ಸ್ಡ್	44	100–00
ಇನ್ಸೂರೆನ್ಸ್ ಹೈಯರ್	45	100–00
ಇನ್ಸೂರೆನ್ಸ್ ಲೋಯರ್	46	100–00
ಕನ್ನಡ ಭಾಷಾ ಪರೀಕ್ಷೆ	47	100–00
ಫುಡ್ ಅಂಡ್ ಸಿವಿಲ್ ಸಪ್ಲೈಸ್ ಎಕ್ಸಾಮಿನೇಷನ್	48	100–00
ಕರ್ನಾಟಕ ಕನ್ಸ್ಯೂಮರ್ ಪ್ರೊಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ಟ್ ಫೋರಮ್ ಸರ್ವಿಸ್ ಎಕ್ಸಾಮಿನೇಷನ್	49	100–00
ಇಂಡಿಯನ್ ಕಾಂಟ್ರಕ್ಟ್ ಆಕ್ಟ್	51	50–00
ಕೆ.ಪಿ.ಎಸ್.ಸಿ. ಮ್ಯಾನ್ಯುಯಲ್	52	50–00
ಕೆ.ಪಿ.ಎಸ್.ಸಿ. ರಿಕ್ರೂಟ್‌ಮೆಂಟ್ ರೂಲ್ಸ್	53	50–00
ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ–1	54	100–00
ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ–2	55	50–00
ಸ್ಪೆಷಲ್ ಲಾಸ್ ಅಂಡ್ ಸರ್ವಿಸ್ ರೂಲ್ಸ್	56	50–00
ಟ್ರಾನ್ಸ್‌ಲೇಷನ್ ಟೆಸ್ಟ್	58	50–00
ಎಸ್.ಎ.ಎಸ್ ಭಾಗ–1	61	100–00
ಎಸ್.ಎ.ಎಸ್ ಭಾಗ–2	62	100–00
ಎಸ್.ಎ.ಎಸ್ ಭಾಗ–3	63	100–00
ಟ್ರೆಜರಿ ಅಕೌಂಟ್ಸ್ ಭಾಗ–1	64	100–00
ಟ್ರೆಜರಿ ಅಕೌಂಟ್ಸ್ ಭಾಗ–2	65	100–00

ವಿಷಯ	ವಿಷಯ ಸಂಕೇತ	ನಿಗದಿಪಡಿಸಲಾದ ಶುಲ್ಕ ರೂ.
ಎಲೆಕ್ಟ್ರಿಸಿಟಿ ಲಾಸ್ ಎಕ್ಸಾಮಿನೇಷನ್	66	100–00
ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್) ಎಕ್ಸಾಮಿನೇಷನ್ ಭಾಗ–1	67	50–00
ಎಲೆಕ್ಟ್ರಿಸಿಟಿ(ಆಡಿಟ್ ಅಂಡ್ ಅಕೌಂಟ್ಸ್)ಲಾಸ್(ಹೈಯರ್)ಎಕ್ಸಾಮಿನೇಷನ್ ಭಾಗ–2	68	50–00
ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಲೋಯರ್) ಎಕ್ಸಾಮಿನೇಷನ್	70	50–00
ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಎಕ್ಸಾಮಿನೇಷನ್	71	50–00
ಕನ್ನಡಭಾಷೆ (ಐ.ಎ.ಎಸ್, ಐ.ಪಿ.ಎಸ್ ಮತ್ತು ಐ.ಎಫ್.ಎಸ್ ಅಧಿಕಾರಿಗಳಿಗೆ)	72	100–00
ಕನ್ನಡ ಭಾಷಾ ಮೌಖಿಕ ಪರೀಕ್ಷೆ	73	100–00

ಪ್ರಮಾಣಪತ್ರ ರವಾನೆ ಶುಲ್ಕ:–ಆಯೋಗವು ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪ್ರಸ್ತುತ ಅಧಿವೇಶನದಿಂದ ಪ್ರಮಾಣ ಪತ್ರಗಳನ್ನು ಶೀಘ್ರ ಅಂಚೆ/ದೃಢೀಕೃತ ಅಂಚೆ ಮೂಲಕ ರವಾನಿಸಲು ಉದ್ದೇಶಿಸಿದ್ದು, ಈ ಸಂಬಂಧ ಅಭ್ಯರ್ಥಿಗಳು ಮೇಲಿನ ವಿಷಯಗಳಿಗೆ ನಿಗದಿಪಡಿಸಿದ ಶುಲ್ಕದ ಜೊತೆಗೆ ಉತ್ತೀರ್ಣತೆಯ ಪ್ರಮಾಣಪತ್ರವನ್ನು **ನೋಂದಾಯಿತ ಅಂಚೆ (Registered Post)** ಮೂಲಕ ರವಾನಿಸುವ ಅಂಚೆ ವೆಚ್ಚ ಒಬ್ಬ ಅಭ್ಯರ್ಥಿಗೆ ರೂ. 30/–ಗಳನ್ನೂ ಸಹ ಶುಲ್ಕ ಪಾವತಿಸುವ ಸಂದರ್ಭದಲ್ಲಿಯೇ ಒಟ್ಟಾರೆಯಾಗಿ ಪಾವತಿಸತಕ್ಕದ್ದು.

4. ಪರೀಕ್ಷಾ ವಿಧಾನ:–

(ಅ) ಇಲಾಖಾ ಪರೀಕ್ಷೆಗಳಲ್ಲಿ ಕೆಳಕಂಡ ವಿಷಯಗಳಿಗೆ ವಸ್ತುನಿಷ್ಠ ಬಹುಆಯ್ಕೆ ಮಾದರಿಯಲ್ಲಿ (OBJECTIVE TYPE MULTIPLE CHOICE) ಪರೀಕ್ಷೆ ನಡೆಸಲಾಗುವುದು.

ಕ್ರ.ಸ.	ವಿಷಯ	ಕ್ರ.ಸ.	ವಿಷಯ
(1)	(2)	(1)	(2)
1	ಅಕೌಂಟ್ಸ್ ಲೋಯರ್	23	ಕಮರ್ಷಿಯಲ್ ಟ್ಯಾಕ್ಸಸ್ ಭಾಗ–2(ಲೋಯರ್)
2	ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–1	24	ಫಾರೆಸ್ಟ್
3	ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–2	25	ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್
4	ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್	26	ಲೇಬರ್
5	ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್	27	ಲೋಕಲ್ ಲಾಸ್ ಆಂಡ್ ಕಮರ್ಷಿಯಲ್ ಬುಕ್ ಕೀಪಿಂಗ್
6	ಫಾರೆಸ್ಟ್‌ಪತ್ರಿಕೆ–1 (ಫಾರೆಸ್ಟ್‌ಗಾರ್ಡ್‌ಗಳಿಗೆ ಮಾತ್ರ)	28	ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್ ಪತ್ರಿಕೆ–1
7	ಫಾರೆಸ್ಟ್‌ಪತ್ರಿಕೆ–2 (ಫಾರೆಸ್ಟ್‌ಗಾರ್ಡ್‌ಗಳಿಗೆ ಮಾತ್ರ)	29	ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಲೋಯರ್
8	ಜನರಲ್ ಲಾ ಭಾಗ–2	30	ಪಿ.ಡಬ್ಲ್ಯೂಡಿ ಹೈಯರ್ ಭಾಗ–1 ಪತ್ರಿಕೆ–2
9	ಹೋಮ್ ಗಾರ್ಡ್ಸ್ ಮ್ಯಾನ್ಯುಯಲ್	31	ಪಿ.ಡಬ್ಲ್ಯೂಡಿ ಹೈಯರ್ ಭಾಗ–2
10	ಆಕ್ಟ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಅಂಡ್ ಚೈಲ್ಡ್ ಡೆವಲಪ್‌ಮೆಂಟ್	32	ಪಿ.ಡಬ್ಲ್ಯೂಡಿ. ಲೋಯರ್
11	ಮೋಟಾರ್ ವೆಹಿಕಲ್ಸ್	33	ರಿಜಿಸ್ಟ್ರೇಷನ್
12	ಮೈನಿಂಗ್ ಭಾಗ–1	34	ಸಿರಿಕಲ್ಚರ್
13	ಮೈನಿಂಗ್ ಭಾಗ–2	35	ಕೋ–ಆಪರೇಷನ್
14	ಪ್ರಿಸನ್ಸ್	36	ಜನರಲ್ ಲಾ ಭಾಗ–1
15	ಪೋರ್ಟ್ಸ್ ಹೈಯರ್	37	ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್
16	ಪೋರ್ಟ್ಸ್ ಲೋಯರ್	38	ಮಾರ್ಕೆಟಿಂಗ್
17	ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ–1	39	ರೆವಿನ್ಯೂ ಹೈಯರ್ ಭಾಗ–1
18	ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ–2	40	ರೆವಿನ್ಯೂ ಹೈಯರ್ ಭಾಗ–2
19	ಯೂಥ್ ಸರ್ವೀಸ್ ಮ್ಯಾನ್ಯುಯಲ್	41	ರೆವಿನ್ಯೂ ಲೋಯರ್
20	ಎಕ್ಸೈಸ್	42	ಕಮರ್ಷಿಯಲ್ ಟ್ಯಾಕ್ಸಸ್ ಭಾಗ–1 0ಹೈಯರ್0
21	ಪೊಲೀಸ್ ಮ್ಯಾನ್ಯುಯಲ್	43	ಕೋ–ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್
22	ಅಕೌಂಟ್ಸ್ ಹೈಯರ್	44	ಇನ್ಶೂರೆನ್ಸ್ ಅಡ್ವಾನ್ಸ್‌ಡ್

ಕ್ರ.ಸ.	ವಿಷಯ	ಕ್ರ.ಸ.	ವಿಷಯ
(1)	(2)	(1)	(2)
45	ಇನ್ಸೂರೆನ್ಸ್ ಹೈಯರ್ ಪತ್ರಿಕೆ–1 ಮತ್ತು ಪತ್ರಿಕೆ–3	54	ಎಸ್.ಎ.ಎಸ್ ಭಾಗ–1 ಪತ್ರಿಕೆ–2 ಮತ್ತು ಪತ್ರಿಕೆ–3
46	ಇನ್ಸೂರೆನ್ಸ್ ಲೋಯರ್ ಪತ್ರಿಕೆ–1 ಮತ್ತು ಪತ್ರಿಕೆ–3	55	ಎಸ್.ಎ.ಎಸ್ ಭಾಗ–2
47	ಫುಡ್ ಅಂಡ್ ಸಿವಿಲ್ ಸಪ್ಲೈಸ್ ಎಕ್ಸಾಮಿನೇಷನ್	56	ಎಸ್.ಎ.ಎಸ್ ಭಾಗ–3
48	ಕರ್ನಾಟಕ ಕನ್ಸ್ಯೂಮರ್ ಪ್ರೊಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ಟ್ ಫೋರಮ್ ಸರ್ವಿಸ್ ಎಕ್ಸಾಮಿನೇಷನ್	57	ಟ್ರೆಜರಿ ಅಕೌಂಟ್ಸ್ ಭಾಗ–1 ಪತ್ರಿಕೆ–2 ಮತ್ತು ಪತ್ರಿಕೆ–3
49	ಇಂಡಿಯನ್ ಕಾಂಟ್ರಕ್ಟ್ ಆಕ್ಟ್	58	ಟ್ರೆಜರಿ ಅಕೌಂಟ್ಸ್ ಭಾಗ–2
50	ಕೆ.ಪಿ.ಎಸ್.ಸಿ. ಮ್ಯಾನ್ಯುಯಲ್	59	ಎಲೆಕ್ಟ್ರಿಸಿಟಿ ಲಾಸ್ ಎಕ್ಸಾಮಿನೇಷನ್
51	ಕೆ.ಪಿ.ಎಸ್.ಸಿ. ರಿಕ್ರೂಟ್‌ಮೆಂಟ್ ರೂಲ್ಸ್	60	ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್) ಎಕ್ಸಾಮಿನೇಷನ್ ಭಾಗ–1
52	ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ–1	61	ಎಲೆಕ್ಟ್ರಿಸಿಟಿ (ಆ ಅಂಡ್ ಆ) ಲಾಸ್ (ಲೋಯರ್) ಎಕ್ಸಾಮಿನೇಷನ್
53	ಸ್ಪೆಷಲ್ ಲಾಸ್ ಅಂಡ್ ಸರ್ವಿಸ್ ರೂಲ್ಸ್	62	ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಎಕ್ಸಾಮಿನೇಷನ್

ಪ್ರತಿ ವಿಷಯಗಳಲ್ಲಿನ ಪಠ್ಯಕ್ರಮದಲ್ಲಿರುವ(**Syllabus**) ಯಾವುದಾದರೂ ನಿಯಮಗಳು/ಅಧಿನಿಯಮಗಳು ನಿರಸನಗೊಂಡಿದ್ದಲ್ಲಿ (**Repealed**) ಅವುಗಳನ್ನು ಕೈಬಿಟ್ಟು ಹೊಸದಾಗಿ ಸೇರ್ಪಡೆಯಾಗಿರುವ ಹಾಗೂ ಪ್ರಸಕ್ತ ಇಲಾಖೆಗಳಲ್ಲಿ ಚಾಲ್ತಿಯಲ್ಲಿರುವ ನಿಯಮ/ಅಧಿನಿಯಮಗಳನ್ವಯ ಪ್ರಶ್ನೆಪತ್ರಿಕೆಗಳನ್ನು ಸಿದ್ದಪಡಿಸಿ ಪರೀಕ್ಷೆಗಳನ್ನು ನಡೆಸಲಾಗುವುದೆಂದು ಅಭ್ಯರ್ಥಿಗಳ ಗಮನಕ್ಕೆ ತರಲಾಗಿದೆ.

ಈ ವಿಷಯಗಳಲ್ಲಿನ ಪಶ್ನೆಪತ್ರಿಕೆಗಳಲ್ಲಿ ಪ್ರತಿ ಪ್ರಶ್ನೆಗೂ ನಾಲ್ಕು ಸಂಭವನೀಯ ಉತ್ತರಗಳಿರುತ್ತವೆ. ಪ್ರತಿ ಪ್ರಶ್ನೆಗೆ ನೀಡಲಾದ ನಾಲ್ಕು ಉತ್ತರಗಳ ಪೈಕಿ ಒಂದು ಸರಿ ಉತ್ತರವನ್ನು ಆಯ್ಕೆ ಮಾಡಿ ಉತ್ತರಿಸಬೇಕಿರುತ್ತದೆ. ಪ್ರತಿ ಪ್ರಶ್ನೆಗೂ ಆಯ್ಕೆ ಮಾಡಲಾದ ಉತ್ತರವು ಎಲ್ಲಾ ರೀತಿಯಿಂದಲೂ ಸಮರ್ಪಕವಾಗಿರುತ್ತದೆಯೆಂದು ಅರಿತು, ತೃಪ್ತಿಹೊಂದಿದ ನಂತರವೇ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಅಭ್ಯರ್ಥಿಗಳು ನೀಲಿ ಅಥವಾ ಕಪ್ಪು ಬಣ್ಣದ ಬಾಲ್‌ಪಾಯಿಂಟ್ ಪೆನ್ನಿನಿಂದ ಎನ್‌ಕೋಡ್ (ಸಂಕೇತ ಗುರುತು) ಮಾಡಬೇಕು. ತರುವಾಯ ತಪ್ಪು ಉತ್ತರಗಳನ್ನು ಯಾವುದೇ ಸಂದರ್ಭದಲ್ಲಿ ಅಳಿಸಲು ಸಾಧ್ಯವಿರುವುದಿಲ್ಲ ಹಾಗೂ ವೈಟ್ ಫ್ಲೂಯಿಡ್ ಬಳಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

ಮೇಲ್ಕಂಡ ವಿಷಯಗಳ ಪರೀಕ್ಷೆಯಲ್ಲಿ ನಿಗದಿಪಡಿಸಲಾದ ವಿಷಯಗಳಿಗೆ ಮಾತ್ರ ನಿಯಮದಂತೆ ಪಠ್ಯಪುಸ್ತಕಗಳನ್ನು ಉಪಯೋಗಿಸಬಹುದು. ವಸ್ತುನಿಷ್ಠ ಬಹುಆಯ್ಕೆ ಮಾದರಿಯ ಪರೀಕ್ಷೆಗೆ ಓ.ಎಂ.ಆರ್. (OMR SHEET) ಹಾಳೆಯಲ್ಲಿ ಮಾತ್ರ ಉತ್ತರಿಸಬೇಕು. ಓ.ಎಂ.ಆರ್. ಉತ್ತರಹಾಳೆ ಮಾದರಿ ಪ್ರತಿಯನ್ನು ಹಾಗೂ ಅಭ್ಯರ್ಥಿಗಳಿಗೆ ನೀಡಲಾದ ಸೂಚನೆಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ನೋಡಬಹುದು.

(ಆ)ಈ ಕೆಳಕಂಡ ವಿಷಯಗಳಿಗೆ ವಿವರಣಾತ್ಮಕ ಮಾದರಿಯಲ್ಲಿ (Descriptive Type)ಪರೀಕ್ಷೆ ನಡೆಸಲಾಗುವುದು.

1. ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್)ಎಕ್ಸಾಮಿನೇಷನ್ ಭಾಗ–2, ಪತ್ರಿಕೆ–1

2. ಎಸ್.ಎ.ಎಸ್. ಭಾಗ–1, ಪತ್ರಿಕೆ–1

3. ಟ್ರೆಜರಿ ಅಕೌಂಟ್ಸ್ ಭಾಗ–1, ಪತ್ರಿಕೆ–1

4. ಇನ್ಸೂರೆನ್ಸ್ ಹೈಯರ್, ಪತ್ರಿಕೆ–2

5. ಇನ್ಸೂರೆನ್ಸ್ ಲೋಯರ್, ಪತ್ರಿಕೆ–2

6. ಪಿ.ಡಬ್ಲ್ಯೂ.ಡಿ. ಹೈಯರ್ ಭಾಗ–1, ಪತ್ರಿಕೆ–1

7. ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ–2

8. ಕನ್ನಡಭಾಷೆ, ಪತ್ರಿಕೆ–1 ಮತ್ತು ಪತ್ರಿಕೆ–2

9. ಕನ್ನಡಭಾಷೆ (ಐ.ಎ.ಎಸ್, ಐ.ಪಿ.ಎಸ್ ಮತ್ತು ಐ.ಎಫ್.ಎಸ್ ಅಧಿಕಾರಿಗಳಿಗೆ)ಪತ್ರಿಕೆ–1 ಮತ್ತು ಪತ್ರಿಕೆ–2.

10. ಟ್ರಾನ್ಸ್‌ಲೇಷನ್ ಟೆಸ್ಟ್

11. ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್, ಪತ್ರಿಕೆ–2.

ಎ) ವಿವರಣಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಸೇವಾ ಪರೀಕ್ಷೆಗಳನ್ನು ಆಂಗ್ಲಭಾಷೆಯಲ್ಲಿ ಅಥವಾ ಕನ್ನಡ ಭಾಷೆಯಲ್ಲಿ ಉತ್ತರಿಸಲು ಅವಕಾಶವಿರುತ್ತದೆ.

ಬಿ) ಅಭ್ಯರ್ಥಿಯು ವಿವರಣಾತ್ಮಕ ಮಾದರಿಯ ಯಾವುದೇ ಒಂದು ಪತ್ರಿಕೆಯನ್ನು ಪೂರ್ಣವಾಗಿ ಆಂಗ್ಲ ಅಥವಾ ಪೂರ್ಣವಾಗಿ ಕನ್ನಡ ಮಾಧ್ಯಮದಲ್ಲಿ ಉತ್ತರಿಸತಕ್ಕದ್ದು. ಭಾಗಶಃ ಆಂಗ್ಲ ಮತ್ತು ಭಾಗಶಃ ಕನ್ನಡದಲ್ಲಿ ಉತ್ತರಿಸಿದಲ್ಲಿ ಅಂತಹ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡದೆ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

5. ಪರೀಕ್ಷಾ ಕೇಂದ್ರಗಳು:

(ಅ) ಇಲಾಖಾ ಪರೀಕ್ಷೆಗಳ ವಿಷಯ ಸಂಕೇತ 51 ರಿಂದ 56, 58, 61 ರಿಂದ 68 ಮತ್ತು 70 ರಿಂದ 72ರ ಪತ್ರಿಕೆಗಳ ಪರೀಕ್ಷೆಗಳನ್ನು ಬೆಂಗಳೂರು ಕೇಂದ್ರದಲ್ಲಿ ಮಾತ್ರವೇ ನಡೆಸಲಾಗುವುದು.

(ಆ) ಉಳಿದಂತೆ ಇತರೆ ಪರೀಕ್ಷೆಗಳು ಈ ಕೆಳಕಂಡ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿದ್ದು, ಜಿಲ್ಲಾ ಸಂಕೇತ ಸಂಖ್ಯೆಗಳನ್ನು ಅವುಗಳ ಎದುರಿಗೆ ನೀಡಿದೆ. ಈ ಸಂಕೇತ ಸಂಖ್ಯೆಗಳನ್ನು ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು:

ಜಿಲ್ಲೆ	ಸಂಕೇತ	ಜಿಲ್ಲೆ	ಸಂಕೇತ
ಬೆಂಗಳೂರು	**01**	ಕಾರವಾರ	**17**
ಬೆಳಗಾವಿ	**02**	ಕೋಲಾರ	**18**
ಬಳ್ಳಾರಿ	**03**	ಕೊಪ್ಪಳ	**19**
ಬೀದರ್	**04**	ಮಂಡ್ಯ	**20**
ಬಿಜಾಪುರ	**05**	ಮಂಗಳೂರು	**21**
ಬಾಗಲಕೋಟೆ	**06**	ಮಡಿಕೇರಿ	**22**
ಚಾಮರಾಜನಗರ	**07**	ಮೈಸೂರು	**23**
ಚಿಕ್ಕಬಳ್ಳಾಪುರ	**08**	ರಾಮನಗರ	**24**
ಚಿಕ್ಕಮಗಳೂರು	**09**	ರಾಯಚೂರು	**25**
ಚಿತ್ರದುರ್ಗ	**10**	ಶಿವಮೊಗ್ಗ	**26**
ಧಾರವಾಡ	**11**	ತುಮಕೂರು	**27**
ದಾವಣಗೆರೆ	**12**	ಉಡುಪಿ	**28**
ಗುಲ್ಬರ್ಗಾ	**13**	ನವದೆಹಲಿ	**29**
ಗದಗ	**14**	ಮಸ್ಸೂರಿ	**30**
ಹಾಸನ	**15**	ಯಾದಗಿರಿ	**31**
ಹಾವೇರಿ	**16**		

(ಇ) ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 69 ಎಸ್‌ಎಸ್‌ಆರ್ 76, ದಿನಾಂಕ 16ನೇ ಜುಲೈ 1977ರ ಅನುಸಾರವಾಗಿ ನವದೆಹಲಿಯ ಕರ್ನಾಟಕ ಭವನದಲ್ಲಿ ಕೆಲಸ ಮಾಡುತ್ತಿರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಇಲಾಖಾ ಪರೀಕ್ಷೆಗಳನ್ನು ಆಯೋಗದಿಂದ "ಉಪನಿವಾಸ ಆಯುಕ್ತರು, ಕರ್ನಾಟಕ ಭವನದ ನಿವಾಸ ಆಯುಕ್ತರ ಕಛೇರಿ, ನವದೆಹಲಿ" ಇವರ ನಿಯಂತ್ರಣದಲ್ಲಿ ನಡೆಸಲಾಗುವುದು.

(ಈ) ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 3 ಎಸ್‌ಎಸ್‌ಸಿ 83, ದಿನಾಂಕ 12ನೇ ಅಕ್ಟೋಬರ್ 1983 ಇದರ ಅನುಸಾರವಾಗಿ ಮಸ್ಸೂರಿಯಲ್ಲಿ ತರಬೇತಿ ಪಡೆಯುತ್ತಿರುವ ಕರ್ನಾಟಕ ರಾಜ್ಯದ ಐ.ಎ.ಎಸ್, ಐ.ಪಿ.ಎಸ್, ಮತ್ತು ಐ.ಎಫ್.ಎಸ್ ಪ್ರೊಬೇಷನರುಗಳಿಗೆ ಇಲಾಖಾಪರೀಕ್ಷೆಗಳನ್ನು ಆಯೋಗವು "ಪರೀಕ್ಷೆಗಳ ನಿಯಂತ್ರಣಾಧಿಕಾರಿ, ಲಾಲ್‌ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಪ್ರಕಾಶನ ಅಕಾಡೆಮಿ, ಮಸ್ಸೂರಿ" ಇವರ ನಿಯಂತ್ರಣದಲ್ಲಿ ನಡೆಸಲಾಗುವುದು.

6. **ಪರೀಕ್ಷಾ ಕೇಂದ್ರದ ಆಯ್ಕೆ ಮತ್ತು ಬದಲಾವಣೆ:**

ಪ್ರತಿಯೊಬ್ಬ ಅಭ್ಯರ್ಥಿಯು ಪ್ರಸ್ತುತ ಆತನು **ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲಾ ಕೇಂದ್ರವನ್ನೇ ಪರೀಕ್ಷಾ ಕೇಂದ್ರವನ್ನಾಗಿ ಆಯ್ಕೆ ಮಾಡಿಕೊಳ್ಳತಕ್ಕದ್ದು.** ಆದರೆ, ಯಾವುದೇ ಒಬ್ಬ ಅಭ್ಯರ್ಥಿಯು ಅನಂತರ ಇತರ ಜಿಲ್ಲೆಗೆ ವರ್ಗಾವಣೆಯಾದಲ್ಲಿ ಅಥವಾ ಅವನು ತನ್ನ ಕೇಂದ್ರ ಕಾರ್ಯಸ್ಥಾನದ ಹೊರಗೆ ಗಳಿಕೆ ರಜೆಯ ಮೇಲಿರುವುದು ಮುಂತಾದ ನಿರ್ದಿಷ್ಟ, ವಿಶೇಷ ಕಾರಣಗಳಿದ್ದಲ್ಲಿ ಅಂತಹ ಅಭ್ಯರ್ಥಿಗಳು ಈ ಬಗ್ಗೆ ಲಿಖಿತ ರೂಪದಲ್ಲಿ ಆಯೋಗದ ಗಮನಕ್ಕೆ ತರತಕ್ಕದ್ದು ಹಾಗೂ ಸಂಬಂಧಿಸಿದ ಮಾಹಿತಿ/ದಾಖಲೆಗಳನ್ನು ಒದಗಿಸತಕ್ಕದ್ದು. ಅಧಿಕೃತ ಕಾರಣಗಳ ಮೇಲೆ ಕೇಂದ್ರ ಬದಲಾವಣೆಗೆ ಅರ್ಜಿ ಸಲ್ಲಿಸುವ ನೌಕರರು ವರ್ಗಾವಣೆಯ ಅಥವಾ ಸ್ಥಳ ನಿಯುಕ್ತಿಯ ಆದೇಶಗಳ ದೃಢೀಕೃತ ನಕಲನ್ನು ಅಥವಾ ಸಂದರ್ಭಾನುಸಾರ ಯಾವುದೇ ಅಧಿಕೃತ ರಜೆ ಮಂಜೂರು ಮಾಡಲಾದ ಅಧಿಕೃತಜ್ಞಾಪನ ಪತ್ರದ ದೃಢೀಕೃತ ನಕಲಿನೊಂದಿಗೆ **ಆ ಬಗ್ಗೆ ಪಡೆದ ಪ್ರಮಾಣ ಪತ್ರವನ್ನು ಲಗತ್ತಿಸಿ ಮನವಿಯನ್ನು ದಿನಾಂಕ: 27–01–2014ರ ಒಳಗಾಗಿ ಆಯೋಗಕ್ಕೆ ಮನವಿಯನ್ನು ಸಲ್ಲಿಸತಕ್ಕದ್ದು. ಅನಂತರ ಸ್ವೀಕೃತ ಮನವಿಗಳನ್ನು ತಿರಸ್ಕರಿಸಲಾಗುವುದು.** ಕೇಂದ್ರ ಬದಲಾವಣೆಗೆ ಅನುಮತಿಸುವುದು/ನಿರಾಕರಿಸುವುದು ಆಯೋಗದ ವಿವೇಚನೆಗೆ ಒಳಪಟ್ಟಿದೆ ಎಂಬ ಅಂಶವನ್ನು ಗಮನಿಸತಕ್ಕದ್ದು. ಆದಾಗ್ಯೂ ಆಯೋಗದ ನಿರ್ದಿಷ್ಟ ಅನುಮತಿ ಇಲ್ಲದೆ ತಾವು ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಕೇಂದ್ರವನ್ನು ಬಿಟ್ಟು ಬೇರೆ ಜಿಲ್ಲಾ ಕೇಂದ್ರದಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳುವಂತಿಲ್ಲ. ಆ ರೀತಿ ಮಾಡಿದ ಅಭ್ಯರ್ಥಿಗಳು ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಹೊಣೆಯಾಗುವರು.

7. **(ಅ) ವಿನಾಯಿತಿಯ ವಿವರ ಹಾಗೂ ಈ ವಿವರಗಳನ್ನು ಅರ್ಜಿಗಳಲ್ಲಿ ನಮೂದಿಸುವ ಬಗ್ಗೆ:**

ಯಾವುದೇ ಪರೀಕ್ಷೆಯು ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನೊಳಗೊಂಡಿದ್ದು ಅಭ್ಯರ್ಥಿಯು ಆ ಪರೀಕ್ಷೆಯಲ್ಲಿ ಅನುತ್ತೀರ್ಣನಾದರೂ ಸಹ ಅದೇ ವಿಷಯದ ಯಾವುದಾದರೂ ಪತ್ರಿಕೆಗಳಲ್ಲಿ ಆ ಪತ್ರಿಕೆಗೆ ನಿರ್ದಿಷ್ಟಪಡಿಸಲಾದ ಗರಿಷ್ಠ ಅಂಕಗಳಲ್ಲಿ ಶೇಕಡಾ 60ಕ್ಕಿಂತ ಕಡಿಮೆ ಇರದಷ್ಟು ಅಂಕಗಳನ್ನು ಪಡೆದಿದ್ದಲ್ಲಿ ಅಂತಹವರನ್ನು ಆ ಪತ್ರಿಕೆಯಲ್ಲಿ ವಿನಾಯಿತಿ ಹೊಂದಿರುವರೆಂದು ಪರಿಗಣಿಸಲಾಗುವುದು. ಅಂತಹವರು ನಿಯಾಮಾನುಸಾರ ಪರೀಕ್ಷೆಗಳ ಫಲಿತಾಂಶ ಘೋಷಿಸಿದ ದಿನಾಂಕದಿಂದ ಎರಡು ವರ್ಷಗಳೊಳಗೆ ಆ ಪರೀಕ್ಷೆಯ ಉಳಿದ ಪತ್ರಿಕೆಗಳಲ್ಲಿ ತೇರ್ಗಡೆಯಾಗಲು ಅವಶ್ಯವಿರುವಷ್ಟು ಅಂಕಗಳನ್ನು ಪಡೆದು ತೇರ್ಗಡೆಯಾಗತಕ್ಕದ್ದು. ಇಲ್ಲದಿದ್ದಲ್ಲಿ ಅಂತಹ ವಿನಾಯ್ತಿಯು ರದ್ದಾಗುವುದು.

ಈ ರೀತಿ ಶೇಕಡ 60 ಹಾಗೂ ಅದಕ್ಕಿಂತಲೂ ಹೆಚ್ಚು ಅಂಕಗಳನ್ನು ಪಡೆದು ವಿನಾಯಿತಿ ಹೊಂದಿರುವಂತಹ ಅಭ್ಯರ್ಥಿಗಳು ಅವರು ವಿನಾಯಿತಿ ಪಡೆದ ವಿಷಯ, ವಿಷಯಸಂಕೇತ, ಪತ್ರಿಕೆ, ನೋಂದಣಿ ಸಂಖ್ಯೆ, ಅಧಿವೇಶನ ಮತ್ತು ಪರೀಕ್ಷಾಕೇಂದ್ರ ಇತ್ಯಾದಿ ವಿವರಗಳನ್ನು ಆನ್‌ಲೈನ್ ಅರ್ಜಿಯಲ್ಲಿ ನಿಗದಿಪಡಿಸಿದ ಅಂಕಣದಲ್ಲಿ ನಿರ್ದಿಷ್ಟವಾಗಿ ನಮೂದಿಸಬೇಕು. ಇಲ್ಲವಾದಲ್ಲಿ ಫಲಿತಾಂಶವನ್ನು ಸಿದ್ಧಪಡಿಸುವಾಗ ಹಿಂದೆ ಪಡೆದ ವಿನಾಯಿತಿಯನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

ಕನ್ನಡಭಾಷಾ ಪರೀಕ್ಷೆ ಪತ್ರಿಕೆ–1 ಮತ್ತು ಪತ್ರಿಕೆ–2 ರಲ್ಲಿ ವಿನಾಯಿತಿ ಪಡೆದಿದ್ದಲ್ಲಿ ಮೌಖಿಕ ಸಂದರ್ಶನಕ್ಕೆ ಹಾಜರಾಗಲು, ಸದರಿ ಅಧಿವೇಶನಕ್ಕೆ ಅರ್ಜಿ ಸಲ್ಲಿಸಿ ವಿನಾಯಿತಿ ಪಡೆದ ಬಗ್ಗೆ ವಿವರಗಳನ್ನು ಆನ್‌ಲೈನ್ ಅರ್ಜಿಯ ಸಂಬಂಧಿಸಿದ ಅಂಕಣದಲ್ಲಿ ಕಡ್ಡಾಯವಾಗಿ ನಮೂದಿಸಬೇಕು. ಹಾಗೂ ನಿಗದಿತ ಪರೀಕ್ಷಾ ಶುಲ್ಕ ರೂ. **100/–**ಗಳನ್ನು ಪಾವತಿಸಬೇಕು ಇಲ್ಲದಿದ್ದಲ್ಲಿ ವಿನಾಯಿತಿಯನ್ನು ಪರಿಗಣಿಸುವುದಿಲ್ಲ.

(ಆ) ವಿದ್ಯಾರ್ಹತೆಗೆ ಸಂಬಂಧ ಪಟ್ಟಂತೆ ನೀಡಲಾಗುವ ವಿನಾಯಿತಿ:

ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದ ಎಲ್.ಎಲ್.ಬಿ ಅಥವಾ ಬಿ.ಎಲ್.,ಬಿ.ಕಾಂ/ಬಿ.ಬಿ.ಎಂ/ ಐ.ಕಾಂ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪದವಿ ಹೊಂದಿದವರು ಕೆಳಕಂಡ ವಿಷಯದ ಪತ್ರಿಕೆಗಳಲ್ಲಿ ವಿನಾಯಿತಿ ಕೋರಬಹುದು.

ಕ್ರ.ಸಂ.	ಪದವಿ	ವಿನಾಯಿತಿ ಇರುವ ವಿಷಯ ಹಾಗೂ ಪತ್ರಿಕೆ
1	ಎಲ್.ಎಲ್.ಬಿ ಅಥವಾ ಬಿ.ಎಲ್	ಜನರಲ್ ಲಾ ಭಾಗ–1 ಪತ್ರಿಕೆ–1
2	ಫೈನಾನ್ಷಿಯಲ್ ಅಕೌಂಟೆನ್ಸಿ ಅಥವಾ ಅಡ್ವಾನ್ಸಡ್ ಅಕೌಂಟೆನ್ಸಿ ವಿಷಯವನ್ನು ಒಳಗೊಂಡಿರುವ ಬಿ.ಕಾಂ/ಬಿ.ಬಿ.ಎಂ/ಐ.ಕಾಂ. ಅಥವಾ ತತ್ಸಮಾನ ಪದವಿ.	ಅ) ಕಮರ್ಷಿಯಲ್ ಟ್ಯಾಕ್ಸ್ ಹೈಯರ್ ಪತ್ರಿಕೆ–3 ಆ) ಕೋ–ಆಪರೇಷನ್ ಪತ್ರಿಕೆ–2 ಇ) ಕೋ–ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ ಪತ್ರಿಕೆ–2 ಈ) ಎಸ್.ಎ.ಎಸ್. ಭಾಗ–3 ಪತ್ರಿಕೆ–1 ಉ) ಟ್ರೆಜರಿ ಅಕೌಂಟ್ಸ್ ಭಾಗ–2 ಪತ್ರಿಕೆ–1

ಆನ್‌ಲೈನ್ ಅರ್ಜಿಯಲ್ಲಿನ ವಿನಾಯಿತಿಗೆ ಸಂಬಂಧಿಸಿದ ಅಂಕಣದಲ್ಲಿ ಅಭ್ಯರ್ಥಿಯು ಪಡೆದಿರುವ ಪದವಿಯ ಬಗ್ಗೆ ಕಡ್ಡಾಯವಾಗಿ ನಮೂದಿಸತಕ್ಕದ್ದು, ತಪ್ಪಿದಲ್ಲಿ ಅಂತಹ ವಿನಾಯಿತಿಯನ್ನು ಪರಿಗಣಿಸಲಾಗುವುದಿಲ್ಲ.

ವಿನಾಯಿತಿ ಕೋರಿರುವ ಅಭ್ಯರ್ಥಿಗಳು ತತ್ಸಂಬಂಧ ವಿಷಯಗಳನ್ನು ಅಭ್ಯಸಿಸಿರುವ ಬಗ್ಗೆ ಪದವಿಯ ಅಂಕಪಟ್ಟಿ ಮತ್ತು ಪ್ರಮಾಣಪತ್ರಗಳನ್ನು ಮೇಲಧಿಕಾರಿಗಳಿಂದ ದೃಢೀಕರಿಸಿ ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಪ್ರತಿಯೊಂದಿಗೆ ಆಯೋಗಕ್ಕೆ ತುರ್ತಾಗಿ ಮನವಿಯನ್ನು ಸಲ್ಲಿಸತಕ್ಕದ್ದು.

ವಿಶೇಷ ಸೂಚನೆ:– ಕಾನೂನು ಪದವಿಯನ್ನು ಹೊಂದಿರುವ ಅಭ್ಯರ್ಥಿಗಳಿಗೆ ಜನರಲ್ ಲಾ ಭಾಗ–2ರ ವಿಷಯದ ಪರೀಕ್ಷೆಯನ್ನು ಬರೆಯುವುದರಿಂದ ಪೂರ್ಣ ವಿನಾಯಿತಿ ಇದ್ದು, ಸದರಿ ಅಭ್ಯರ್ಥಿಗಳು ಈ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ. ಬದಲಾಗಿ ಅಭ್ಯರ್ಥಿಗಳು ಸಂಬಂಧಿತ ಅಂಕಪಟ್ಟಿ/ ದಾಖಲೆಗಳನ್ನು ತಮ್ಮ ಇಲಾಖಾ ಮುಖ್ಯಸ್ಥರಿಗೆ ಸಲ್ಲಿಸಿ ಅವರಿಂದಲೇ ವಿನಾಯಿತಿ ಪಡೆಯಬಹುದಾಗಿರುತ್ತದೆ.

ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 76, ದಿನಾಂಕ 10ನೇ ಜನವರಿ 1987ರ ಅನುಸಾರವಾಗಿ ಸರ್ಕಾರಿ ಆದೇಶ ಸಂಖ್ಯೆ 649 ಇಎನ್‌ಟಿ 57, ದಿನಾಂಕ 23ನೇ/25ನೇ ಫೆಬ್ರವರಿ 1959ರ ಅನುಸಾರವಾಗಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಿಂದ ನಡೆಸಲಾದ ಅರಣ್ಯ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಅರಣ್ಯ ಪರೀಕ್ಷೆಯ ಪತ್ರಿಕೆ–2 ರಲ್ಲಿ ತೇರ್ಗಡೆಯಾಗುವುದರಿಂದ ವಿನಾಯಿತಿ ನೀಡಲಾಗಿದೆ.

8. ಕನ್ನಡಭಾಷಾ ಲಿಖಿತ ಪರೀಕ್ಷೆಗೆ ಮೌಖಿಕ ಪರೀಕ್ಷೆ:

ಕನ್ನಡ ಭಾಷಾ ವಿಷಯದ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಮೌಖಿಕ ಪರೀಕ್ಷೆಯನ್ನು ಆಯೋಗದ ಕೇಂದ್ರ ಕಛೇರಿ, ಉದ್ಯೋಗ ಸೌಧ, ಬೆಂಗಳೂರು–560001, ಇಲ್ಲಿ ಹಾಗೂ ಆಯೋಗದ ಪ್ರಾಂತೀಯ ಕಛೇರಿಗಳಿರುವ ಬೆಳಗಾಂ, ಗುಲ್ಬರ್ಗಾ, ಮೈಸೂರು ಹಾಗೂ ಶಿವಮೊಗ್ಗ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುವುದು. ಆಯೋಗದ ವಿವೇಚನೆಯಂತೆ ಅನಿವಾರ್ಯ ಸಂದರ್ಭಗಳಲ್ಲಿ ರಾಜ್ಯದ ಇತರೆ ಜಿಲ್ಲಾ ಕೇಂದ್ರಗಳಲ್ಲಿಯೂ ಮೌಖಿಕ ಪರೀಕ್ಷೆಯನ್ನು ನಡೆಸಲಾಗುವುದು.

ಯಾವುದೇ ಸರ್ಕಾರಿ ನೌಕರನು/ನೌಕರಳು ಕನ್ನಡಭಾಷಾ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಹೊರತು ಕನ್ನಡ ಮೌಖಿಕ ಪರೀಕ್ಷೆಗೆ ಅರ್ಹರಾಗುವುದಿಲ್ಲ.

ಆದರೆ

(1) ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 81 ಎಸ್‌ಎಸ್‌ಆರ್ 81, ದಿನಾಂಕ 6ನೇ ಜೂನ್ 1981ರ ಮೇರೆಗೆ ಗೃಹರಕ್ಷಕ ಸಂಸ್ಥೆಯ ಸೈನಿಕರು ಕನ್ನಡ ಭಾಷಾ, ಮೌಖಿಕ ಪರೀಕ್ಷೆಯಲ್ಲಿ ಮಾತ್ರ ತೇರ್ಗಡೆಯಾಗತಕ್ಕದ್ದು. ವೇತನ ಮುಂಬಡ್ತಿ ಪಡೆಯುವ ಮತ್ತು ಸೇವಾ ಸ್ಥಿರೀಕರಣದ ಉದ್ದೇಶಗಳಿಗೆ ಕನ್ನಡ ಭಾಷಾ ಲಿಖಿತ ಪರೀಕ್ಷೆಯ ಬದಲಾಗಿ ಗರಿಷ್ಠ 50 ಅಂಕಗಳನ್ನು ನಿಗದಿಪಡಿಸಿರುವ ಕನ್ನಡ ಮೌಖಿಕ ಪರೀಕ್ಷೆಯಲ್ಲಿ ಮಾತ್ರ ಅವರು ತೇರ್ಗಡೆ ಹೊಂದಬೇಕಾಗಿರುತ್ತದೆ.

(2) ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 3 ಎಸ್‌ಎಸ್‌ಆರ್ 82, ದಿನಾಂಕ 30ನೇ ಆಗಸ್ಟ್ 1982ರ ಮೇರೆಗೆ ಅಂಧರಾಗಿರುವ ಮತ್ತು ಕೆಲಸಕ್ಕೆ ಓದುವುದು ಮತ್ತು ಬರೆಯುವುದು ಅವಶ್ಯವಿಲ್ಲದ ಸರ್ಕಾರಿ ನೌಕರರಿಗೆ ಸ್ಥಿರೀಕರಣದ ಮತ್ತು ವಾರ್ಷಿಕ ವೇತನ ಮುಂಬಡ್ತಿಗಳನ್ನು ಪಡೆಯುವ ಉದ್ದೇಶಗಳಿಗಾಗಿ ಕನ್ನಡ ಭಾಷಾ ಲಿಖಿತ ಸೇವಾ ಪರೀಕ್ಷೆಯಲ್ಲಿ ತೇರ್ಗಡೆ ಯಾಗುವುದರಿಂದ ವಿನಾಯಿತಿಸಲಾಗಿದೆ. ಆದರೆ ಅವರು ಕನ್ನಡ ಭಾಷಾ ಮೌಖಿಕ ಪರೀಕ್ಷೆಯಲ್ಲಿ ತೇರ್ಗಡೆಯಾಗತಕ್ಕದ್ದು.

(3) ಸರ್ಕಾರದ ಆದೇಶ ಸಂಖ್ಯೆಸಿಆಸುಇ 26 ಸೆಸೆನಿ 94, ಬೆಂಗಳೂರು, ದಿನಾಂಕ:14–07–1994ರಲ್ಲಿ ಸೂಚಿಸಿರುವ ಕಂಪೋಜಿಟರ್, ಸೀನಿಯರ್ ಕಂಪೋಜಿಟರ್, ಸೀನಿಯರ್ ಮಷಿನ್ ಮೈಂಡರ್, ಸೀನಿಯರ್ ಬೈಂಡರ್, ಸಹಾಯಕ ಪ್ರೊಸೆಸ್ ಅಪರೇಟರ್, ಆಫ್‌ಸೆಟ್ ಪ್ರಿಂಟರ್, ಅಫ್‌ಸೆಟ್ ಪ್ಲೇಟ್ ಮೇಕರ್ ಹಾಗೂ ವೈರ್‌ಮನ್ ಈ ಪದನಾಮವನ್ನು ಹೊಂದಿರುವ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ಸಿಬ್ಬಂದಿವರ್ಗದವರು ಮುಂಬಡ್ತಿ ಪಡೆಯಲು ಕನ್ನಡಭಾಷಾ ಪರೀಕ್ಷೆಯ ಲಿಖಿತ ಪರೀಕ್ಷೆ (ಪೇಪರ್ 1 ಮತ್ತು 2) ಯಿಂದ ವಿನಾಯಿತಿ ಹೊಂದಿರುತ್ತಾರೆ. ಆದರೆ ಮೌಖಿಕ ಪರೀಕ್ಷೆಯಲ್ಲಿ ಶೇಕಡ 40ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಬೇಕಾಗಿರುತ್ತದೆ.

9. ಕನ್ನಡ ಭಾಷಾ ಪಠ್ಯ ಕ್ರಮ:

ಅಖಿಲ ಭಾರತ ಸೇವಾ ಅಧಿಕಾರಿ (ಐಎಎಸ್/ಐಪಿಎಸ್/ಐಎಫ್‌ಎಸ್)ಗಳಿಗೆ ಕನ್ನಡಭಾಷಾ ವಿಷಯದ (ಸಂಕೇತ–72) ಇಲಾಖಾ ಪರೀಕ್ಷೆಯ ಅಭ್ಯರ್ಥಿಗಳಿಗೆ ಸರ್ಕಾರವು ತನ್ನ ಆದೇಶ ಸಂಖ್ಯೆ:ಡಿಪಿಎಆರ್168 ಎಸ್‌ಎಂಇ 94, ದಿನಾಂಕ:12–07–1995ರ ಪ್ರಕಾರ 10ನೇ ತರಗತಿಯ ಕನ್ನಡ ದ್ವಿತೀಯ ಹಾಗೂ ತೃತೀಯ ಭಾಷಾಪುಸ್ತಕ "ತಿಳಿಗನ್ನಡ–6" ಎಂಬ ಪುಸ್ತಕವನ್ನು ನಿಗದಿಪಡಿಸಲಾಗಿದೆ.

ಅಖಿಲ ಭಾರತ ಸೇವಾ ಅಧಿಕಾರಿಗಳನ್ನು ಹೊರತುಪಡಿಸಿ ಕನ್ನಡ ಭಾಷಾ ವಿಷಯದ (ಸಂಕೇತ–47) ಇಲಾಖಾ ಪರೀಕ್ಷೆ ಇತರೆ ಅಭ್ಯರ್ಥಿಗಳಿಗೆ:

(ಅ) ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿ ಇವರಿಂದ ಪ್ರಕಾಶನಗೊಂಡಿರುವ ವಿವಿಧ ಲೇಖಕರಿಂದ ರಚಿತವಾದ **"ಸತ್ಯಕ್ಕೆ ಬೆಲೆಕೊಟ್ಟ ಗೆಳೆಯರು"** ಪಾಠದಿಂದ ಪ್ರಾರಂಭಗೊಳ್ಳುವ **"ಸಣ್ಣ ಕಥೆಗಳು"** ಮತ್ತು

(ಆ) ಆರನೆಯ ತರಗತಿಯ ಪಠ್ಯ ಪುಸ್ತಕವಾದ **"ಕನ್ನಡ ಕಸ್ತೂರಿ"**ಯನ್ನು ನಿಗದಿಪಡಿಸಲಾಗಿದೆ.

10. ಪ್ರವೇಶ ಪತ್ರ:

ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುತ್ತಿರುವುದರಿಂದ ಪ್ರವೇಶಪತ್ರಗಳನ್ನು ಅಂಚೆ ಮೂಲಕ ಕಳುಹಿಸಲಾಗುವುದಿಲ್ಲ.

ವೇಳಾಪಟ್ಟಿಯನ್ನೊಳಗೊಂಡ ಪ್ರವೇಶಪತ್ರವನ್ನು ಪರೀಕ್ಷೆಗೆ ಮೊದಲು ಆಯೋಗದ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗುತ್ತದೆ. ಅಭ್ಯರ್ಥಿಗಳು ಪ್ರವೇಶಪತ್ರಗಳನ್ನು **Down load** ಮಾಡಿಕೊಂಡು ಮೇಲಧಿಕಾರಿಗಳ ದೃಢೀಕರಣದೊಂದಿಗೆ ನಿಗದಿತ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾವೇಳೆಯಲ್ಲಿ ಪ್ರವೇಶಪತ್ರವನ್ನು ಹಾಜರುಪಡಿಸತಕ್ಕದ್ದು. ಸದರಿ ಪ್ರವೇಶ ಪತ್ರಗಳನ್ನು ಅಭ್ಯರ್ಥಿಗಳು ಜೋಪಾನವಾಗಿಟ್ಟುಕೊಂಡಿರಬೇಕು ಮತ್ತು ಅವುಗಳನ್ನು ತಮ್ಮ ಸೇವಾ ದಾಖಲೆಗಳಲ್ಲಿ ನಮೂದು ಮಾಡುವುದಕ್ಕಾಗಿ ಆಯೋಗದಿಂದ ನೀಡಲಾದ ತೇರ್ಗಡೆ ಪ್ರಮಾಣ ಪತ್ರದೊಂದಿಗೆ ಸಕ್ಷಮ ಪ್ರಾಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು. ಯಾವುದೇ ಸಂದರ್ಭದಲ್ಲಿ ಪರೀಕ್ಷೆಗಳು ಮುಗಿದ ನಂತರ ಪ್ರವೇಶಪತ್ರದ ನಕಲನ್ನು ನೀಡಲಾಗುವುದಿಲ್ಲ.

ಆಯೋಗದ ವೆಬ್‌ಸೈಟ್‌ನಿಂದ Down load ಮಾಡಿಕೊಂಡ ಪ್ರವೇಶಪತ್ರದಲ್ಲಿ ಹೆಸರು, ಪದನಾಮ, ವಿಳಾಸ ಇತ್ಯಾದಿ ವಿವರಗಳು ತಪ್ಪಾಗಿ ಕಂಡುಬಂದಲ್ಲಿ ತಕ್ಷಣ ಅವುಗಳನ್ನು ತಿದ್ದುಪಡಿ ಮಾಡುವಂತೆ ಕೋರಿ ಪ್ರವೇಶಪತ್ರದ ಜೆರಾಕ್ಸ್ ಪ್ರತಿಯೊಂದಿಗೆ ತಿದ್ದುಪಡಿಗೆ ಅಗತ್ಯವಿರುವ ದಾಖಲೆ/ಮಾಹಿತಿಗಳನ್ನು ಮೇಲಧಿಕಾರಿಗಳಿಂದ ದೃಢೀಕರಿಸಿ ಆಯೋಗಕ್ಕೆ ಮನವಿಯನ್ನು ಸಲ್ಲಿಸಿದಲ್ಲಿ ಪ್ರಮಾಣಪತ್ರವನ್ನು ಮುದ್ರಿಸುವ ಮುನ್ನ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಪ್ರಮಾಣಪತ್ರವನ್ನು ಒದಗಿಸಲಾಗುವುದು.

11. ಪಠ್ಯಪುಸ್ತಕಗಳು:

ಪಠ್ಯಪುಸ್ತಕಗಳನ್ನು ಉಪಯೋಗಿಸಿ ಪರೀಕ್ಷೆ ಬರೆಯಬಹುದಾದ ಪತ್ರಿಕೆಗಳಿಗೆ ಅಭ್ಯರ್ಥಿಗಳು ಸರ್ಕಾರದಿಂದ ಪ್ರಕಾಶಿಸಲ್ಪಟ್ಟ ಪಠ್ಯಪುಸ್ತಕಗಳನ್ನು ಮತ್ತು ಖಾಸಗಿ ಪ್ರಕಾಶಕರಿಂದ ಪ್ರಕಾಶಿಸಲ್ಪಟ್ಟ ಪುಸ್ತಕಗಳನ್ನು ಸರ್ಕಾರಿ ಪ್ರಕಾಶಿತ ಪುಸ್ತಕಗಳ ಮಾದರಿಗೆ ಯಾವುದೇ ರೀತಿಯ ತದ್ವಿರುದ್ಧವಾಗಿಲ್ಲದಿದ್ದರೆ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ 3ನೇ ಡಿಸೆಂಬರ್ 1991ರ ಆದೇಶಕ್ಕೆ ಅನುಗುಣವಾಗಿದ್ದರೆ ಅಂತಹ ಪಠ್ಯ ಪುಸ್ತಕಗಳನ್ನು ಮಾತ್ರ ಪರೀಕ್ಷಾ ಕೇಂದ್ರಗಳಲ್ಲಿ ಉಪಯೋಗಿಸಬಹುದಾಗಿರುತ್ತದೆ. ಇತರೇ ಯಾವುದೇ ಖಾಸಗಿ ಪ್ರಕಾಶಕರು ಸಿದ್ಧಪಡಿಸಿದ ಗೈಡ್‌ಗಳನ್ನು ನಿಷೇಧಿಸಲಾಗಿದೆ.

ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್ ಮತ್ತು ಲೋಯರ್ ವಿಷಯಗಳ ಪರೀಕ್ಷೆಯಲ್ಲಿ "ಉದ್ಯೋಗ ಮತ್ತು ತರಬೇತಿ ಮಹಾನಿರ್ದೇಶನಾಲಯ, ನವದೆಹಲಿ" ಇವರು ಪ್ರಕಟಿಸಿರುವ "ಎಂಪ್ಲಾಯ್‌ಮೆಂಟ್ ಸರ್ವೀಸ್ ಮ್ಯಾನ್ಯುಯಲ್" ಪುಸ್ತಕವನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆ.

12. ತೇರ್ಗಡೆಗೆ ಗಳಿಸಬೇಕಾದ ಅಂಕಗಳು:

ಎ) ಯಾವುದೇ ಸೇವಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಒಂದು ಪತ್ರಿಕೆಯನ್ನು ಒಳಗೊಂಡ ವಿಷಯವಾಗಿದ್ದಲ್ಲಿ ಸದರಿ ಪತ್ರಿಕೆಯಲ್ಲಿ ಕನಿಷ್ಠ ಶೇಕಡ 40 ಅಂಕಗಳನ್ನು ಪಡೆದಿರಬೇಕು. ಒಂದಕ್ಕಿಂತ ಹೆಚ್ಚು ಪತ್ರಿಕೆಗಳಿದ್ದಲ್ಲಿ ಪ್ರತಿ ಪತ್ರಿಕೆಯಲ್ಲಿ ಕನಿಷ್ಠ ಶೇಕಡಾ 35 ಮತ್ತು ಒಟ್ಟು ಎಲ್ಲಾ ಪತ್ರಿಕೆಗಳಿಂದ ಕನಿಷ್ಠ ಶೇಕಡಾ 40 ಅಂಕಗಳನ್ನು ಪಡೆದಿರಬೇಕು. ವಿನಾಯಿತಿ ಕೋರಿದ ಬಿ.ಕಾಂ., ಬಿ.ಬಿ.ಎಂ., ಹಾಗೂ ಕಾನೂನು ಪದವೀಧರರು, ಹಾಜರಾಗುವ ವಿಷಯದ ಪ್ರತಿ ಪತ್ರಿಕೆಗಳಲ್ಲಿ ಕನಿಷ್ಠ ಶೇಕಡ 35 ಅಂಕಗಳನ್ನು ಹಾಗೂ ಪ್ರತಿ ವಿಷಯದ ಎಲ್ಲಾ ಪತ್ರಿಕೆಗಳ ಸರಾಸರಿ 40 ಅಂಕಗಳನ್ನು ಗಳಿಸಿರಬೇಕು.

ಬಿ) ಯಾವುದೇ ಪರೀಕ್ಷೆಯಲ್ಲಿ ನಿಗದಿಪಡಿಸಿದ ಗರಿಷ್ಠ ಅಂಕಗಳಲ್ಲಿ ಶೇಕಡ 60ಕ್ಕಿಂತ ಕಡಿಮೆ ಇರದಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾದಂತಹ ಅಭ್ಯರ್ಥಿಗಳನ್ನು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವುದಾಗಿ ಫಲಿತಾಂಶ ಘೋಷಿಸಲಾಗುವುದು.

13. ಹಾಜರಿ ಪ್ರಮಾಣ ಪತ್ರಗಳು:

ಪರೀಕ್ಷೆಗೆ ಹಾಜರಾದ ಬಗ್ಗೆ ಹಾಜರಾತಿ ಪ್ರಮಾಣಪತ್ರ ಪಡೆಯಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪರೀಕ್ಷಾಕೇಂದ್ರದ ಮೇಲ್ವಿಚಾರಕರಿಂದ ಅದನ್ನು ಪರೀಕ್ಷಾ ದಿನದಂದೇ ಪಡೆಯತಕ್ಕದ್ದು. ಹಾಜರಿ ಪ್ರಮಾಣಪತ್ರವನ್ನು ಆಯೋಗದ ಕಛೇರಿಯಿಂದ ಯಾವುದೇ ಸಂದರ್ಭದಲ್ಲೂ ನೀಡಲಾಗುವುದಿಲ್ಲ.

14. ತೇರ್ಗಡೆ ಪ್ರಮಾಣ ಪತ್ರಗಳು:

ಆಯೋಗದಿಂದ ಫಲಿತಾಂಶವನ್ನು ಅಧಿಕೃತವಾಗಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ನಂತರ ಅಭ್ಯರ್ಥಿಗಳು ಉತ್ತೀರ್ಣರಾದ ವಿಷಯಗಳಿಗೆ ಸಂಬಂಧಿಸಿದ ಪ್ರಮಾಣಪತ್ರವನ್ನು ಅರ್ಜಿಯಲ್ಲಿ ನಮೂದಿಸಿರುವ ಕಛೇರಿಯ ವಿಳಾಸಕ್ಕೆ ಕಳುಹಿಸಲಾಗುವುದು. ಪ್ರಮಾಣ ಪತ್ರದಲ್ಲಿ ಮುದ್ರಿತವಾದ ಹೆಸರು ಅಥವಾ ಇನ್ನಾವುದೇ ರೀತಿಯ ತಪ್ಪುಗಳು ಕಂಡುಬಂದಲ್ಲಿ ಅಭ್ಯರ್ಥಿಗಳು ಕೂಡಲೇ ತಿದ್ದುಪಡಿಗಾಗಿ ಸೂಕ್ತ ದಾಖಲೆಗಳೊಂದಿಗೆ ತಮ್ಮ ಮೂಲ ಪ್ರಮಾಣಪತ್ರದೊಂದಿಗೆ ಆಯೋಗದ ಕಛೇರಿಯನ್ನು ಸಂಪರ್ಕಿಸುವುದು/ಮನವಿ ಸಲ್ಲಿಸಬಹುದು.

ಅಂಕಗಳ ಮಾಹಿತಿಯನ್ನು ಅಪೇಕ್ಷಿಸುವ ಅಭ್ಯರ್ಥಿಗಳು ಆಯೋಗದ ವೆಬ್‌ಸೈಟ್ "http://kpsc.kar.nic.in"ನಲ್ಲಿ ತಮ್ಮ ನೋಂದಣಿ ಸಂಖ್ಯೆ. ಮತ್ತು ಜನ್ಮ ದಿನಾಂಕವನ್ನು ನಮೂದಿಸಿ ಅಂಕಪಟ್ಟಿಯನ್ನು ಪಡೆದುಕೊಳ್ಳಬಹುದು.

15. ಅಂಕಗಳ ಮರು ಎಣಿಕೆ:

ಯಾವುದೇ ಪರೀಕ್ಷೆಯಲ್ಲಿ ಅನುತ್ತೀರ್ಣನಾದ ಅಭ್ಯರ್ಥಿಯು ಫಲಿತಾಂಶ ಪ್ರಕಟವಾದ ದಿನಾಂಕದಿಂದ 30 ದಿನಗಳೊಳಗಾಗಿ ಸದರಿ ಪರೀಕ್ಷೆಯ ಎಲ್ಲಾ ಪತ್ರಿಕೆಗಳ ಅಥವಾ ಯಾವುದೇ ನಿರ್ದಿಷ್ಟ ಪತ್ರಿಕೆಯ ಅಂಕಗಳ ಮರುಎಣಿಕೆಗಾಗಿ ಆಯೋಗಕ್ಕೆ ಅರ್ಜಿ ಸಲ್ಲಿಸಬಹುದು. ಅಂತಹ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಅಭ್ಯರ್ಥಿಯು **ಪ್ರತಿ** ವಿಷಯಕ್ಕೆ **ರೂ. 100/–**ಗಳನ್ನು "ಕಾರ್ಯದರ್ಶಿ,ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು", ಇವರಿಗೆ ಸಂದಾಯವಾಗುವಂತೆ ಪಡೆದ ಡಿಡಿ/ಐಪಿಓ ಮೂಲಕ ಸಂದಾಯ ಮಾಡತಕ್ಕದ್ದು ಹಾಗೂ ಅಭ್ಯರ್ಥಿಯು ತನ್ನ ಹೆಸರು, ಪರೀಕ್ಷಾ ಕೇಂದ್ರ, ನೋಂದಣಿ ಸಂಖ್ಯೆ ಮತ್ತು ಮರು ಎಣಿಕೆ ಮಾಡಬೇಕಾದ ವಿಷಯದ ವಿವರಗಳನ್ನು ನಮೂದಿಸಿದ ಅರ್ಜಿಯೊಂದಿಗೆ ಶುಲ್ಕ ಸಂದಾಯ ಮಾಡಿದ ಐ.ಪಿ.ಓ/ಡಿ.ಡಿ.ಯನ್ನು ಲಗತ್ತಿಸಿ ಸಲ್ಲಿಸತಕ್ಕದ್ದು. ಅಭ್ಯರ್ಥಿಯು ಪಡೆದ ಅಂಕಗಳ ಮರು ಎಣಿಕೆಯ ಸಂಬಂಧದಲ್ಲಿ ಆಯೋಗದ ನಿರ್ಣಯವೇ ಅಂತಿಮವಾಗಿರುತ್ತದೆ.

16. ಅನುಲೇಖಿನ ಸಹಾಯ:

ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 19 ಎಸ್‌ಎಸ್‌ಸಿ 75, ದಿನಾಂಕ 5ನೇ ಜುಲೈ 1978ರ ಅನುಸಾರವಾಗಿ ಅಂಧರಾಗಿರುವ ಅಥವಾ ತನ್ನ ಸ್ವಂತ ಕೈಯಿಂದ ಬರೆಯಲು ಅಸಮರ್ಥರಾದ ಅಭ್ಯರ್ಥಿಗಳಿಗೆ ಈ ಮುಂದಿನ ಷರತ್ತುಗಳಿಗೊಳಪಟ್ಟು ಒಬ್ಬ ಅನುಲೇಖಕನ ಸಹಾಯವನ್ನು ಪಡೆಯುವುದಕ್ಕೆ ಅನುಮತಿಸಲಾಗಿದೆ:

1. ಅನುಲೇಖಕನ ಸಹಾಯ ಬಯಸುವ ಅಭ್ಯರ್ಥಿಗಳು ಅವಶ್ಯಕ ವೈದ್ಯಕೀಯ ಪ್ರಮಾಣ ಪತ್ರ ಮತ್ತು ಮೇಲಧಿಕಾರಿಗಳ ದೃಢೀಕರಣವನ್ನು ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಪ್ರತಿಯೊಂದಿಗೆ ಲಗತ್ತಿಸಿ **ದಿನಾಂಕ: 17-01-2014ರ ಒಳಗಾಗಿ ಆಯೋಗಕ್ಕೆ ಮನವಿಯನ್ನು ಸಲ್ಲಿಸತಕ್ಕದ್ದು**. ಆ ನಂತರ ಸಲ್ಲಿಸಲಾಗುವ ಮನವಿಗಳನ್ನು ಪುರಸ್ಕರಿಸುವುದಿಲ್ಲ.
2. ಮೇಲಧಿಕಾರಿಯು ವೈದ್ಯಕೀಯ ಪ್ರಮಾಣಪತ್ರವನ್ನು ಆಯೋಗಕ್ಕೆ ಕಳುಹಿಸುವ ಮೊದಲು ಅಭ್ಯರ್ಥಿಯು ನಿಜವಾಗಿ ಅಸಮರ್ಥನಾಗಿರುವನೆ ಮತ್ತು ಅವನಿಗೆ ಅನುಲೇಖಕನ ಸಹಾಯ ಅವಶ್ಯವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
3. ಆಯೋಗವು ಅನುಲೇಖಕನ ಸಹಾಯಕ್ಕೆ ಮಂಜೂರಾತಿ ನೀಡಿದಾಗ ಸಂಬಂಧಪಟ್ಟ ಕೇಂದ್ರದ ಮೇಲ್ವಿಚಾರಕರು ಅಭ್ಯರ್ಥಿಗೆ ಒಬ್ಬ ಅನುಲೇಖಕನನ್ನು ನೇಮಕ ಮಾಡತಕ್ಕದ್ದು ಮತ್ತು ಅದನ್ನು ಕಾರ್ಯದರ್ಶಿ ಮತ್ತು ಇಲಾಖಾ ಪರೀಕ್ಷೆಯ ನಿಯಂತ್ರಣಾಧಿಕಾರಿಗೆ ತಿಳಿಸತಕ್ಕದ್ದು.
4 ಹಾಗೆ ನೇಮಕ ಮಾಡಲಾದ ಅನುಲೇಖಕನು ಅಭ್ಯರ್ಥಿಗಿಂತ ಕೆಳಗಿನ ದರ್ಜೆಯವನು ಅಥವಾ ಕಡಿಮೆ ಶಿಕ್ಷಣ ಪಡೆದವನು ಆಗಿರತಕ್ಕದ್ದು ಮತ್ತು ಅವನು ಅಭ್ಯರ್ಥಿಯ ಸಂಬಂಧಿಕನಾಗಿರಬಾರದು.
5. ಅಭ್ಯರ್ಥಿಗಳು ಪರೀಕ್ಷೆಯ ಪ್ರತಿಯೊಂದು ಪತ್ರಿಕೆಗೆ ರೂ.5/-(ಐದು ರೂಪಾಯಿಗಳು)ಮೊತ್ತವನ್ನು ಮುಂಗಡವಾಗಿ ಸಂದಾಯ ಮಾಡತಕ್ಕದ್ದು ಮತ್ತು ಸದರಿ ಮೊತ್ತವನ್ನು ಪರೀಕ್ಷೆಯ ಪತ್ರಿಕೆ ಮುಗಿದ ಕೂಡಲೇ ಅನುಲೇಖಕನಿಗೆ ಸಂದಾಯ ಮಾಡತಕ್ಕದ್ದು.
6. ಅನುಲೇಖಕನನ್ನು ನೇಮಕ ಮಾಡಲಾಗಿದ್ದರೆ ಅಂತಹ ಅಭ್ಯರ್ಥಿಗೆ ಹದಿನೈದು ನಿಮಿಷಗಳ ಹೆಚ್ಚಿನ ಕಾಲಾವಕಾಶವನ್ನು ನೀಡಲಾಗುವುದು.

ಸೂಚನೆ:- ಅಭ್ಯರ್ಥಿಗಳು ಅನುಲೇಖಕನ ಸಹಾಯ ಕೋರಿ ಸಲ್ಲಿಸುವ ವೈದ್ಯಕೀಯ ಪ್ರಮಾಣ ಪತ್ರವನ್ನು ಅನುಮಾನಾಸ್ಪದ ಸಂದರ್ಭದಲ್ಲಿ ವೈದ್ಯಕೀಯ ಮಂಡಳಿಗೆ ಪರಿಶೀಲನೆಗಾಗಿ ಕಳುಹಿಸಲಾಗುವುದು, ಹಾಗೂ ಕೆಲವೊಂದು ಸಂದರ್ಭಗಳಲ್ಲಿ ಅವಶ್ಯಕವೆನಿಸಿದರೆ ಅಂತಹವರನ್ನು ವೈದ್ಯಕೀಯ ಪರಿಶೀಲನೆಗೂ ಗುರಿಪಡಿಸಲಾಗುವುದು. ಸುಳ್ಳು ಪ್ರಮಾಣಪತ್ರ ಹಾಜರುಪಡಿಸಿದ್ದು ಸಾಬೀತಾದ ಸಂದರ್ಭಗಳಲ್ಲಿ ಅಂತಹ ಅಭ್ಯರ್ಥಿಗಳ ಮೇಲೆ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸಲಾಗುವುದಲ್ಲದೆ ಅಂತಹವರ ಇಲಾಖಾ ಪರೀಕ್ಷೆಯ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

17. ನಕಲು ಪ್ರಮಾಣ ಪತ್ರ:

ಅಭ್ಯರ್ಥಿಯು ವಿವಿಧ ವಿಷಯಗಳಲ್ಲಿ ಉತ್ತೀರ್ಣಗೊಂಡ ಬಗ್ಗೆ ಆಯೋಗದಿಂದ ಪಡೆಯಲಾದ ಮೂಲ ಪ್ರಮಾಣಪತ್ರವನ್ನು ಕಳೆದುಕೊಂಡಲ್ಲಿ ಅಂತಹ ಅಭ್ಯರ್ಥಿಗಳು ನಕಲು ಪ್ರಮಾಣಪತ್ರವನ್ನು ಪಡೆದುಕೊಳ್ಳಬಹುದಾ ಗಿದ್ದು, ಸದರಿ ಪ್ರಮಾಣಪತ್ರಕ್ಕಾಗಿ ಮನವಿಯೊಂದಿಗೆ ಈ ಕೆಳಗೆ ಸೂಚಿಸಿರುವ ಮಾಹಿತಿ/ದಾಖಲೆಗಳನ್ನು ಆಯೋಗಕ್ಕೆ ಒದಗಿಸುವ ಅಗತ್ಯವಿರುತ್ತದೆ.

(1) ನಕಲು ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸಲು ಕಾರಣಗಳನ್ನು ತಿಳಿಸುವ ಹಾಗೂ ಪರೀಕ್ಷಾ ವಿವರಗಳನ್ನೊಳ ಗೊಂಡ ರೂ.20/-ಮೌಲ್ಯದ ಮುದ್ರಾಂಕ ಕಾಗದದ ಮೇಲೆ ನೋಟರಿಯವರ ಮುಂದೆ ಪ್ರಮಾಣೀಕರಿಸಲಾದ ಅಫಿಡವಿಟ್‌ನ ಮೂಲ ಪ್ರತಿ;

(2) ಪ್ರತಿ ವಿಷಯ ಒಂದಕ್ಕೆ 100-00 ರೂ. ನಂತೆ ಶುಲ್ಕವನ್ನು ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು, ಇವರಿಗೆ ಸಂದಾಯವಾಗುವಂತೆ ಬ್ಯಾಂಕ್ ಡಿ.ಡಿ./ಭಾರತೀಯ ಅಂಚೆ ಆದೇಶ (ಐ.ಪಿ.ಓ)

(3) ಪ್ರವೇಶಪತ್ರದ ನೆರಳಚ್ಚು ಪ್ರತಿ ಮತ್ತು ಪರೀಕ್ಷೆಯಲ್ಲಿ ಉತ್ತೀರ್ಣಗೊಂಡ ಬಗ್ಗೆ ವಿವರಗಳನ್ನು ನಮೂದಿಸಿರುವ ಸೇವಾ ಪುಸ್ತಕದ ಉಧೃತ ಭಾಗದ ನೆರಳಚ್ಚು ಪ್ರತಿ.

18. ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಇತ್ತೀಚೆಗೆ ಜಾರಿಗೊಂಡಿರುವ ಸರ್ಕಾರಿ ಆದೇಶಗಳು:

(1) Karnataka Civil Services (Service and Kannada Language Examinations) Rules, 1974

(1) A Government servant who has passed-

(a) the Secondary School Leaving Certificate Examination or any examination declared as equivalent thereto by the State Government, or any examination higher than the Secondary School Leaving Certificate Examination,

(i) in which the question papers on different subjects are answered in Kannada Language; or

(ii) in which Kannada is the main language, Second Language or an optional subject, but not one of the subject in a composite paper ,or

(aa) Diploma Course/Certificate Course in Kannada conducted by a University established by Law in India, or " Kava", " Jana" or "Rathna" examinations conducted by Kannada Sahitya Parishat.

(ab) Correspondence course in Kannada conducted by the Central Institute of Indian Languages, Mysore.

(2) ಸರ್ಕಾರಿ ಅಧಿಸೂಚನೆ ಸಂಖ್ಯೆ. ಸಿಆಸುಇ 3 ಸೆಸೆನಿ 2010, ಬೆಂಗಳೂರು, ದಿನಾಂಕ:02-02-2011.

"(ಎಸಿ) ಕರ್ನಾಟಕ ಸಿವಿಲ್ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು, 2006ರಲ್ಲಿ ನಿಗದಿಪಡಿಸಿರುವಂತೆ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇಮಕಾತಿಗೆ, ಆಯ್ಕೆ ಪರೀಕ್ಷೆಯ ಒಂದು ಭಾಗವಾಗಿ ಲೋಕಸೇವಾ ಆಯೋಗ ಅಥವಾ ಇತರ ಯಾವುದೇ ಆಯ್ಕೆ ಪ್ರಾಧಿಕಾರ ನಡೆಸುವ ಕನ್ನಡಭಾಷಾ ಪರೀಕ್ಷೆ".

(3) any examination specified in Schedule III as equivalent to the Kannada Language Examination, or who has won a prize in Kannada essay competition conducted by any University established by law, shall on obtaining a certificate of exemption under sub-rule (5) be deemed to have passed the Kannada Language Examination under these rules.

19. **ಅಭ್ಯರ್ಥಿಗಳಿಗೆ ವಿಶೇಷ ಸೂಚನೆಗಳು:–**

(1) ಸೇವಾ ಪರೀಕ್ಷೆಗಳಿಗೆ ಸಂಬಂಧಪಟ್ಟ ಎಲ್ಲಾ ಪತ್ರ ವ್ಯವಹಾರವನ್ನು ಕಾರ್ಯದರ್ಶಿ ಹಾಗೂ ನಿಯಂತ್ರಕರು, ಇಲಾಖಾ ಪರೀಕ್ಷೆಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560001 ಈ ವಿಳಾಸಕ್ಕೆ ಮಾಡತಕ್ಕದ್ದು.

(2) ಪರೀಕ್ಷೆಗಳ ಸಂಬಂಧದಲ್ಲಿ ಯಾವುದೇ ಮಾಹಿತಿ ಕೋರುವ ಅಭ್ಯರ್ಥಿಗಳು ಮನವಿಯಲ್ಲಿ ಎಲ್ಲಾ ಮಾಹಿತಿ ನೀಡಿ ಅದರೊಂದಿಗೆ ಸಾಕಷ್ಟು ಅಂಚೆ ಚೀಟಿಗಳನ್ನು ಹಚ್ಚಿದ ಸ್ವವಿಳಾಸ ಬರೆದ ಒಂದು ಲಕೋಟೆಯನ್ನು ಲಗತ್ತಿಸಿ ಕಳುಹಿಸಿಕೊಟ್ಟಲ್ಲಿ ಆಯೋಗವು ತುರ್ತಾಗಿ ಉತ್ತರವನ್ನು ನೀಡಲು ಅನುಕೂಲವಾಗುವುದು.

(3) ಮಾಹಿತಿಗಾಗಿ ಅಭ್ಯರ್ಥಿಗಳು ಆಯೋಗಕ್ಕೆ ಸಲ್ಲಿಸುವ ಮನವಿಗಳಲ್ಲಿ ನೋಂದಣಿ ಸಂಖ್ಯೆ, ಅಧಿವೇಶನ, ವಿಷಯ ಮತ್ತು ಪರೀಕ್ಷಾಕೇಂದ್ರ ಮುಂತಾದ ಸ್ಪಷ್ಟ ವಿವರಗಳನ್ನು ಸೂಚಿಸದಿದ್ದಲ್ಲಿ ಅಂತಹವುಗಳನ್ನು ಪುರಸ್ಕರಿಸಲಾಗುವುದಿಲ್ಲ.

(4) ಅಭ್ಯರ್ಥಿಗಳು ಪೊಲೀಸ್ ಅಥವಾ ಇನ್ನಾವುದೇ ಸಮವಸ್ತ್ರವನ್ನು ಧರಿಸಿ ಪರೀಕ್ಷೆ ಬರೆಯುವುದನ್ನು ನಿಷೇಧಿಸಲಾಗಿದೆ.

(5) ಅಭ್ಯರ್ಥಿಗಳು ತಮ್ಮೊಂದಿಗೆ ಸಹ ನೌಕರರನ್ನು/ಇತರರನ್ನು ಪರೀಕ್ಷಾ ಕೊಠಡಿಯೊಳಗೆ ಕರೆತರುವುದನ್ನು ಮತ್ತು ಪರೀಕ್ಷೆ ನಡೆಯುತ್ತಿರುವಾಗ ಅವರನ್ನು ಭೇಟಿ ಮಾಡಲು ಕೋರುವುದನ್ನು ನಿಷೇಧಿಸಲಾಗಿದೆ.

(6) ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್ ಹಾಗೂ ಇತರೆ ಎಲೆಕ್ಟ್ರಾನಿಕ್ ಉಪಕರ– ಗಳನ್ನು ತರುವುದನ್ನು ಮತ್ತು ಉಪಯೋಗಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

(7) ಅಭ್ಯರ್ಥಿಗಳು ತಮಗೆ ಕಾಯ್ದಿರಿಸಿದ ಸ್ಥಳದಲ್ಲಿ ಮಾತ್ರ ಕುಳಿತು ಪರೀಕ್ಷೆ ಬರೆಯತಕ್ಕದ್ದು. ತಪ್ಪಿದಲ್ಲಿ ಅವರ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು.

(8) ಯಾವುದೇ ಹುದ್ದೆಗೆ ಕಡ್ಡಾಯಗೊಳಿಸಿದ ವಿಷಯಗಳ ಪೈಕಿ ಈ ಅಧಿಸೂಚನೆಯೊಂದಿಗೆ ಪ್ರಕಟಿಸಿದ ವೇಳಾಪಟ್ಟಿಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳು ಒಂದೇದಿನ, ಒಂದೇಸಮಯದಲ್ಲಿ ನಡೆಯುವಂತಿದ್ದರೆ, ಅವುಗಳಲ್ಲಿ ಒಂದಕ್ಕೆ ಮಾತ್ರ ಅರ್ಜಿ ಸಲ್ಲಿಸಿ ಪರೀಕ್ಷೆಗೆ ಹಾಜರಾಗತಕ್ಕದ್ದು.

(9) ಪಠ್ಯ ಕ್ರಮಕ್ಕಾಗಿ ಅಭ್ಯರ್ಥಿಗಳು ಕರ್ನಾಟಕ ನಾಗರಿಕ ಸೇವಾ (ಸೇವೆ ಮತ್ತು ಕನ್ನಡಭಾಷಾ ಪರೀಕ್ಷೆಗಳು) ನಿಯಮಗಳು, 1974 ಮತ್ತು ಅದಕ್ಕೆ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗಿರುವ ತಿದ್ದುಪಡಿಗಳನ್ನು ನೋಡಬಹುದು.

(10) ಆಯೋಗದ ಆದೇಶ ಸಂಖ್ಯೆ ಇ.ಪ(2)3774/94–95/ಪಿಎಸ್‌ಸಿ ದಿನಾಂಕ 18ನೇ, ಫೆಬ್ರವರಿ 1995ರ ಮೇರೆಗೆ ಬ್ಯಾಟರಿ ಚಾಲಿತ ಪ್ರೋಗ್ರಾಮ್ ಮಾಡದೆ ಇರುವಂತಹ ಕ್ಯಾಲ್ಕುಲೇಟರ್‌ಗಳನ್ನು ಮಾತ್ರ ಎಸ್.ಎ.ಎಸ್. ಪರೀಕ್ಷೆಗಳಲ್ಲಿ ಉಪಯೋಗಿಸಲು ಅಭ್ಯರ್ಥಿಗಳಿಗೆ ಅನುಮತಿ ನೀಡಲಾಗಿದೆ

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳು:

ಶಾಖೆಗಳು	**ದೂರವಾಣಿ ಸಂಖ್ಯೆಗಳು**
ಮಾಹಿತಿ ಕೇಂದ್ರ	080–30574957/ 080–30574901
ಇಲಾಖಾ ಪರೀಕ್ಷಾ ಶಾಖೆ–1	080–30574944
ಇಲಾಖಾ ಪರೀಕ್ಷಾ ಶಾಖೆ–2	080–30574945
ಪ್ರಾಂತೀಯ ಕಛೇರಿ ಬೆಳಗಾವಿ	0831–2475345
ಪ್ರಾಂತೀಯ ಕಛೇರಿ ಗುಲ್ಬರ್ಗಾ	08472–227944
ಪ್ರಾಂತೀಯ ಕಛೇರಿ ಮೈಸೂರು	0821–2545956
ಪ್ರಾಂತೀಯ ಕಛೇರಿ ಶಿವಮೊಗ್ಗ	08182–228099
ಸಹಾಯವಾಣಿ	080– 30574913

20. ದುರ್ವರ್ತನೆ:

ಯಾವುದೇ ಒಬ್ಬ ಅಭ್ಯರ್ಥಿಯು ಸೇವಾ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಕೃತ್ರಿಮ ದಸ್ತಾವೇಜನ್ನು ಅಥವಾ ಅಕ್ರಮವಾಗಿ ತಿದ್ದಿದ ದಸ್ತಾವೇಜುಗಳನ್ನು ಸಲ್ಲಿಸಿದ ಅಥವಾ ಸರಿಯಲ್ಲದ ಅಥವಾ ಸುಳ್ಳು ವಿವರಣೆಯನ್ನು ನೀಡಿದ ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿದ ಅಥವಾ ಪರೀಕ್ಷೆಯಲ್ಲಿ ಅಕ್ರಮ ವಿಧಾನವನ್ನು ಅನುಸರಿಸಲು ಪ್ರಯತ್ನಿಸಿದ ಅಥವಾ ಬೇರೆ ರೀತಿಯಲ್ಲಿ ಇತರೆ ಯಾವುದೇ ಅಕ್ರಮ/ಅನುಚಿತ ಮಾರ್ಗವನ್ನು ಅನುಸರಿಸಿದ ಅಪರಾಧವನ್ನು ಮಾಡಿರುವುದಾಗಿ ಆಯೋಗಕ್ಕೆ ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಯನ್ನು ಕ್ರಿಮಿನಲ್ ವ್ಯವಹರಣೆಗೆ ಗುರಿಪಡಿಸುವುದಲ್ಲದೆ, ಆಯೋಗದ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ.ಆಡಳಿತ.398/1993–94/ಪಿಎಸ್‌ಸಿ, ದಿನಾಂಕ: 14–07–1993ರ ಮೇರೆಗೆ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.

ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ ಸಂವೀಕ್ಷಕರು/ಮೇಲ್ವಿಚಾರಕರು ನೀಡುವ ಸೂಚನೆಗಳನ್ನು ತಪ್ಪದೇ ಪಾಲಿಸುವುದು. ತಪ್ಪಿದಲ್ಲಿ ಅದನ್ನು ದುರ್ವರ್ತನೆಯನ್ನಾಗಿ ಪರಿಗಣಿಸಲಾಗುವುದು ಮತ್ತು ಈ ಬಗ್ಗೆ ಶಿಸ್ತಿನ ಕಾರ್ಯವಿಧಾನಗಳಿಗೆ ಒಳಪಡಿಸಲಾಗುವುದು.

ಆರ್. ವೆಂಕಟೇಶ್ ಕುಮಾರ್,
ಪರೀಕ್ಷಾ ನಿಯಂತ್ರಕರು,
ಕರ್ನಾಟಕ ಲೋಕಸೇವಾ ಆಯೋಗ.

ಕರ್ನಾಟಕ ಲೋಕಸೇವಾ ಆಯೋಗ, "ಉದ್ಯೋಗ ಸೌಧ", ಬೆಂಗಳೂರು-560001.

ಅಧಿಸೂಚನೆ, ಸಂಖ್ಯೆ ಇಪ(1) 953/2013-14/ಪಿಎಸ್‌ಸಿ, ದಿನಾಂಕ: 12-12-2013

ಅನುಬಂಧ " ಎ "

2013ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳು

ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿರುವ ಪರೀಕ್ಷೆಗಳ ವೇಳಾಪಟ್ಟಿ.

ಕ್ರ.ಸಂ.	ವಾರ	ದಿನಾಂಕ	ವೇಳೆ	ವಿಷಯ
1	ಶನಿವಾರ	**15-02-2014**	ಬೆಳಿಗ್ಗೆ 10.00 ರಿಂದ 12-00 ಗಂಟೆ	ಅಕೌಂಟ್ಸ್ ಲೋಯರ್
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಜನರಲ್ ಲಾ ಭಾಗ- **II**
2	ಭಾನುವಾರ	**16-02-2014**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಅಕೌಂಟ್ಸ್ ಹೈಯರ್ ಪತ್ರಿಕೆ-**1**
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಅಕೌಂಟ್ಸ್ ಹೈಯರ್ ಪತ್ರಿಕೆ-**2**
3	ಸೋಮವಾರ	**17-02-2014**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಜನರಲ್ ಲಾ ಭಾಗ- **I** ಪತ್ರಿಕೆ- **1**
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಜನರಲ್ ಲಾ ಭಾಗ- **I** ಪತ್ರಿಕೆ- **2**
4	ಮಂಗಳವಾರ	**18-02-2014**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಕನ್ನಡ ಪತ್ರಿಕೆ-**1** (ಪುಸ್ತಕಗಳಿಲ್ಲದೆ)
			ಮಧ್ಯಾಹ್ನ 2.00 ರಿಂದ ಸಂಜೆ 3.00 ಗಂಟೆ	ಕನ್ನಡ ಪತ್ರಿಕೆ-**2** (ಪುಸ್ತಕಗಳಿಲ್ಲದೆ)
5	ಬುಧವಾರ	**19-02-2014**	ಬೆಳಿಗ್ಗೆ 10.00 ರಿಂದ 1.00 ಗಂಟೆ	ಇನ್ಸೂರೆನ್ಸ್ ಹೈಯರ್ ಪತ್ರಿಕೆ-**2** (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಪಿ.ಡಬ್ಲ್ಯೂಡಿ ಹೈಯರ್ ಭಾಗ- **I** ಪತ್ರಿಕೆ-**1,** (ಪುಸ್ತಕಗಳಿಲ್ಲದೆ)
			ಮಧ್ಯಾಹ್ನ 2.00 ರಿಂದ ಸಂಜೆ 5.00 ಗಂಟೆ	ಇನ್ಸೂರೆನ್ಸ್ ಲೋಯರ್ ಪತ್ರಿಕೆ-**2** {ಪುಸ್ತಕಗಳಿಲ್ಲದೆ}
			ಮೇಲಿನಂತೆ	ಪ್ರೆಸ್ ಮ್ಯಾನ್ಯುಯಲ್ ಹೈಯರ್ ಪತ್ರಿಕೆ-**2,**
6	ಗುರುವಾರ	**20-02-2014**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಲೇಬರ್ ಪತ್ರಿಕೆ-**1**
			ಮೇಲಿನಂತೆ	ಪ್ರಿಸನ್ಸ್
			ಮೇಲಿನಂತೆ	ಎಕ್ಸೈಸ್
			ಮೇಲಿನಂತೆ	ಮೋಟಾರ್ ವೆಹಿಕಲ್ಸ್
			ಮೇಲಿನಂತೆ	ರೆವಿನ್ಯೂ ಹೈಯರ್ ಭಾಗ- I ಪತ್ರಿಕೆ-**1**
			ಮೇಲಿನಂತೆ	ಇನ್ಸೂರೆನ್ಸ್ ಅಡ್ವಾನ್ಸಡ್ ಪತ್ರಿಕೆ-**1**
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಲೇಬರ್ ಪತ್ರಿಕೆ-**2**
			ಮೇಲಿನಂತೆ	ಇನ್ಸೂರೆನ್ಸ್ ಅಡ್ವಾನ್ಸಡ್ ಪತ್ರಿಕೆ-**2**
			ಮೇಲಿನಂತೆ	ರೆವಿನ್ಯೂ ಹೈಯರ್ ಭಾಗ- I ಪತ್ರಿಕೆ-**2.**
7	ಶುಕ್ರವಾರ	**21-02-2014**	ಬೆಳಿಗ್ಗೆ 10.00 ರಿಂದ 12.00 ಗಂಟೆ	ರೆವಿನ್ಯೂ ಹೈಯರ್ ಭಾಗ- **II** ಪತ್ರಿಕೆ-**1**
			ಮೇಲಿನಂತೆ	ರಿಜಿಸ್ಟ್ರೇಷನ್ ಪತ್ರಿಕೆ-**1**
			ಮೇಲಿನಂತೆ	ಕಮರ್ಷಿಯಲ್‌ಟ್ಯಾಕ್ಸ್ ಭಾಗ- **I** ಪತ್ರಿಕೆ-**1**
			ಮೇಲಿನಂತೆ	ಇನ್ಸೂರೆನ್ಸ್ ಅಡ್ವಾನ್ಸಡ್ ಪತ್ರಿಕೆ-**3**
			ಮಧ್ಯಾಹ್ನ **2.00** ರಿಂದ ಸಂಜೆ **4.00** ಗಂಟೆ	ರೆವಿನ್ಯೂ ಹೈಯರ್ ಭಾಗ- **II** ಪತ್ರಿಕೆ-**2**
			ಮೇಲಿನಂತೆ	ರಿಜಿಸ್ಟ್ರೇಷನ್ ಪತ್ರಿಕೆ-**2**
			ಮೇಲಿನಂತೆ	ಕಮರ್ಷಿಯಲ್‌ಟ್ಯಾಕ್ಸ್ ಭಾಗ- **I,** ಪತ್ರಿಕೆ-**2**
			ಮೇಲಿನಂತೆ	ಇನ್ಸೂರೆನ್ಸ್ ಹೈಯರ್ ಪತ್ರಿಕೆ-**1**
8	ಶನಿವಾರ	**22-02-2014**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಪೊಲೀಸ್ ಮ್ಯಾನ್ಯುಯಲ್
			ಮೇಲಿನಂತೆ	ಕೋ-ಆಪರೇಷನ್ ಪತ್ರಿಕೆ-**1**
			ಮೇಲಿನಂತೆ	ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಪ್ರೊಸೀಜರ್ ಹೈಯರ್
			ಮೇಲಿನಂತೆ	ಮಾರ್ಕೆಟಿಂಗ್ ಪತ್ರಿಕೆ-**1**
			ಮೇಲಿನಂತೆ	ಮೈನಿಂಗ್ ಭಾಗ- **I**
			ಮೇಲಿನಂತೆ	ರೆವಿನ್ಯೂ ಲೋಯರ್ ಪತ್ರಿಕೆ-**1**

ಕ್ರ.ಸಂ.	ವಾರ	ದಿನಾಂಕ	ವೇಳೆ	ವಿಷಯ
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಕಮರ್ಷಿಯಲ್ ಟ್ಯಾಕ್ಸ್ ಭಾಗ– **I,** ಪತ್ರಿಕೆ–**3** ಮತ್ತು – ಕೋ–ಆಪರೇಷನ್ ಪತ್ರಿಕೆ–**2**
				(ಎರಡಕ್ಕೂ ಒಂದೇ ಪ್ರಶ್ನೆ ಪತ್ರಿಕೆ)
			ಮೇಲಿನಂತೆ	ಇನ್ಸೂರೆನ್ಸ್ ಹೈಯರ್ ಪತ್ರಿಕೆ–**3**
			ಮೇಲಿನಂತೆ	ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್
			ಮೇಲಿನಂತೆ	ಮಾರ್ಕೆಟಿಂಗ್ ಪತ್ರಿಕೆ–**2**
			ಮೇಲಿನಂತೆ	ಮೈನಿಂಗ್ ಭಾಗ– **II**
			ಮೇಲಿನಂತೆ	ರೆವಿನ್ಯೂ ಲೋಯರ್ ಪತ್ರಿಕೆ–**2**
9	ಭಾನುವಾರ	**23–02–2014**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಸಿರಿಕಲ್ಚರ್ ಪತ್ರಿಕೆ–**1**
			ಮೇಲಿನಂತೆ	ಕಮ್ಯೂನಿಟಿ ಡೆವಲಪ್‌ಮೆಂಟ್ ಭಾಗ– **I**
			ಮೇಲಿನಂತೆ	ರೆವಿನ್ಯೂ ಲೋಯರ್ ಪತ್ರಿಕೆ–**3**
			ಮೇಲಿನಂತೆ	ಕಮರ್ಷಿಯಲ್ ಟ್ಯಾಕ್ಸ್ ಭಾಗ–**II** ಪತ್ರಿಕೆ–**1**
			ಮೇಲಿನಂತೆ	ಪ್ರೆಸ್ ಮ್ಯಾನ್ಯುಯಲ್ ಹೈಯರ್ ಪತ್ರಿಕೆ–**1**
			ಮೇಲಿನಂತೆ	ಲೋಕಲ್ ಲಾಸ್ ಅಂಡ್ ಕಮರ್ಷಿಯಲ್
				ಬುಕ್ ಕೀಪಿಂಗ್ ಪತ್ರಿಕೆ–**1**
			ಮೇಲಿನಂತೆ	ಪೋರ್ಟ್ಸ್ ಹೈಯರ್
			ಮೇಲಿನಂತೆ	ಇನ್ಸೂರೆನ್ಸ್ ಲೋಯರ್ ಪತ್ರಿಕೆ–**1**
			ಮೇಲಿನಂತೆ	ಯೂಥ್ ಸರ್ವೀಸಸ್ ಮ್ಯಾನ್ಯುಯಲ್
			ಮಧ್ಯಾಹ್ನ 2.00ರ ರಿಂದ ಸಂಜೆ 4.00 ಗಂಟೆ	ಸಿರಿಕಲ್ಚರ್ ಪತ್ರಿಕೆ–**2**
			ಮೇಲಿನಂತೆ	ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–**I,**ಪತ್ರಿಕೆ–**2**
			ಮೇಲಿನಂತೆ	ಲೋಕಲ್ ಲಾಸ್ ಅಂಡ್ ಕಮರ್ಷಿಯಲ್
				ಬುಕ್ ಕೀಪಿಂಗ್ ಪತ್ರಿಕೆ–**2**
			ಮೇಲಿನಂತೆ	ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–**II**
			ಮೇಲಿನಂತೆ	ಕಮರ್ಷಿಯಲ್ ಟ್ಯಾಕ್ಸ್ ಭಾಗ–**II** ಪತ್ರಿಕೆ–**2**
			ಮೇಲಿನಂತೆ	ಪೋರ್ಟ್ಸ್ ಲೋಯರ್
10	ಸೋಮವಾರ	**24–02–2014**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್ ಪತ್ರಿಕೆ–1
			ಮೇಲಿನಂತೆ	ಇನ್ಸೂರೆನ್ಸ್ ಲೋಯರ್ ಪತ್ರಿಕೆ–**3**
			ಮೇಲಿನಂತೆ	ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–**II,**ಪತ್ರಿಕೆ–**1**
			ಮೇಲಿನಂತೆ	ಪ್ರೆಸ್ ಮ್ಯಾನ್ಯುಯಲ್ ಲೋಯರ್ ಪತ್ರಿಕೆ–**1**
			ಮೇಲಿನಂತೆ	ಆಕ್ಟ್ಸ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಅಂಡ್ ಚೈಲ್ಡ್ ಡೆವೆಲಪ್‌ಮೆಂಟ್
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್ ಪತ್ರಿಕೆ–2
			ಮೇಲಿನಂತೆ	ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–**II,** ಪತ್ರಿಕೆ–**2**
			ಮೇಲಿನಂತೆ	ಪ್ರೆಸ್ ಮ್ಯಾನ್ಯುಯಲ್ ಲೋಯರ್ ಪತ್ರಿಕೆ–**2**
			ಮೇಲಿನಂತೆ	ಕೋ–ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ ಪತ್ರಿಕೆ–1

ಕ್ರ.ಸಂ.	ವಾರ	ದಿನಾಂಕ	ವೇಳೆ	ವಿಷಯ
11	ಮಂಗಳವಾರ	**25-02-2014**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಪಿ.ಡಬ್ಲ್ಯೂ.ಡಿ. ಲೋಯರ್ ಪತ್ರಿಕೆ-**1**
			ಮೇಲಿನಂತೆ	ಸೋಶಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್ ವರ್ಡ್‌ಕ್ಲಾಸಸ್ ಮ್ಯಾನ್ಯುಯಲ್ ಅಂಡ್ ಕ್ಲಾಸಿಫಿಕೇಶನ್ ರಿಜರ್‌ವೇಶನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ ಭಾಗ- **I**
			ಮೇಲಿನಂತೆ	ಫಾರೆಸ್ಟ್ ಪತ್ರಿಕೆ-**1**
			ಮೇಲಿನಂತೆ	ಕೋ-ಆಪರೇಟಿವ್ ಆಡಿಟ್ ಎಕ್ಸಾಮಿನೇಶನ್ ಪತ್ರಿಕೆ-**2**
			ಮೇಲಿನಂತೆ	ಫುಡ್ ಅಂಡ್ ಸಿವಿಲ್ ಸಪ್ಲೈಸ್ ಪತ್ರಿಕೆ-**1**
			ಮಧ್ಯಾಹ್ನ 2.00 ರಿಂದ ಸಂಜೆ 4.00ಗಂಟೆ	ಹೋಂ ಗಾರ್ಡ್ಸ್ ಮ್ಯಾನ್ಯುಯಲ್
			ಮೇಲಿನಂತೆ	ಸೋಶಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್ ವರ್ಡ್‌ಕ್ಲಾಸಸ್ ಮ್ಯಾನ್ಯುಯಲ್ ಅಂಡ್ ಕ್ಲಾಸಿಫಿಕೇಶನ್ ರಿಜರ್‌ವೇಶನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ ಭಾಗ- **II**
			ಮೇಲಿನಂತೆ	ಪಿ.ಡಬ್ಲ್ಯೂ.ಡಿ. ಲೋಯರ್ ಪತ್ರಿಕೆ-**2**
			ಮೇಲಿನಂತೆ	ಫಾರೆಸ್ಟ್ ಪತ್ರಿಕೆ-**2**
			ಮೇಲಿನಂತೆ	ಕೋ-ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ ಪತ್ರಿಕೆ-**3**
			ಮೇಲಿನಂತೆ	ಫುಡ್ ಅಂಡ್ ಸಿವಿಲ್ ಸಪ್ಲೈಸ್ ಪತ್ರಿಕೆ-**2**
12	ಬುಧವಾರ	**26-02-2014**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ ಪತ್ರಿಕೆ-1
			ಮೇಲಿನಂತೆ	ಕರ್ನಾಟಕ ಕನ್‌ಸ್ಯೂಮರ್ ಪ್ರೋಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ಟ್ ಫೋರಮ್ ಸರ್ವಿಸ್ ಎಕ್ಸಾಮಿನೇಷನ್, ಪತ್ರಿಕೆ-**1**
			ಮಧ್ಯಾಹ್ನ 2.00 ರಿಂದ ಸಂಜೆ 4.00ಗಂಟೆ	ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ ಪತ್ರಿಕೆ-**2**
			ಮೇಲಿನಂತೆ	ಕರ್ನಾಟಕ ಕನ್‌ಸ್ಯೂಮರ್ ಪ್ರೋಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ಟ್ ಫೋರಮ್ ಸರ್ವಿಸ್ ಎಕ್ಸಾಮಿನೇಷನ್, ಪತ್ರಿಕೆ-**2**

ಆರ್. ವೆಂಕಟೇಶ್ ಕುಮಾರ್,
ಪರೀಕ್ಷಾ ನಿಯಂತ್ರಕರು,
ಕರ್ನಾಟಕ ಲೋಕಸೇವಾ ಆಯೋಗ.

ಕರ್ನಾಟಕ ಲೋಕಸೇವಾ ಆಯೋಗ,"ಉದ್ಯೋಗ ಸೌಧ", ಬೆಂಗಳೂರು-560001.

ಅಧಿಸೂಚನೆ. ಸಂಖ್ಯೆ ಇಪ.(1)953/2013-14/ಪಿಎಸ್‌ಸಿ, ದಿನಾಂಕ:12-12-2013

ಅನುಬಂಧ- " ಬಿ "

2013ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳು ಬೆಂಗಳೂರು ಕೇಂದ್ರದಲ್ಲಿ ಮಾತ್ರ ನಡೆಯಲಿರುವ ಪರೀಕ್ಷೆಗಳ ವೇಳಾಪಟ್ಟಿ.

ಕ್ರ.ಸಂ.	ವಾರ	ದಿನಾಂಕ	ವೇಳೆ	ವಿಷಯ
1	ಸೋಮವಾರ	**03-03-2014**	ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆ	ಎಸ್.ಎ.ಎಸ್.ಭಾಗ- **I**, ಪತ್ರಿಕೆ-**1** ಮತ್ತು ಎಲೆಕ್ಟ್ರಿಸಿಟಿ ಆಡಿಟ್ ಅಂಡ್ ಅಕೌಂಟ್ಸ್‌ಲಾಸ್ (ಹೈಯರ್) ಭಾಗ- **II** (ಎರಡಕ್ಕೂ ಒಂದೇ ಪ್ರಶ್ನೆ ಪತ್ರಿಕೆ) (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ- **I** ಪತ್ರಿಕೆ-**1** (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಕನ್ನಡ ಪತ್ರಿಕೆ-**1**(ಐಎಎಸ್,ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಮಾತ್ರ) (ಪುಸ್ತಕಗಳಿಲ್ಲದೆ)
			ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 12.00 ಗಂಟೆ	ಸ್ಪೆಷಲ್ ಲಾಸ್ ಅಂಡ್ ಸರ್ವೀಸ್ ರೂಲ್ಸ್
			ಮೇಲಿನಂತೆ	ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್ ಎಕ್ಸಾಮಿನೇಷನ್
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಎಸ್.ಎ.ಎಸ್.ಭಾಗ- **I** ಪತ್ರಿಕೆ-**2** (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ- **I** ಪತ್ರಿಕೆ-**2**(ಪುಸ್ತಕಗಳಿಲ್ಲದೆ)
			ಮಧ್ಯಾಹ್ನ 2.00 ರಿಂದ ಸಂಜೆ 5.00 ಗಂಟೆ	ಸೆಕ್ರೆಟೇರಿಯಟ್ ಮ್ಯಾನುಯಲ್ ಭಾಗ- **II**
			ಮೇಲಿನಂತೆ	ಟ್ರಾನ್ಸ್‌ಲೇಶನ್ ಟೆಸ್ಟ್ (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಕನ್ನಡ ಪತ್ರಿಕೆ-**2** (ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಮಾತ್ರ) (ಪುಸ್ತಕಗಳಿಲ್ಲದೆ)

ಕ್ರ.ಸಂ.	ವಾರ	ದಿನಾಂಕ	ವೇಳೆ	ವಿಷಯ
2	ಮಂಗಳವಾರ	**04–03–2014**	ಬೆಳಿಗ್ಗೆ 10.00 ರಿಂದ 12.00 ಗಂಟೆ ಮೇಲಿನಂತೆ ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ ಮೇಲಿನಂತೆ	ಎಸ್.ಎ.ಎಸ್. ಭಾಗ– **I** ಪತ್ರಿಕೆ–**3** ಟ್ರೆಜರಿ ಅಕೌಂಟ್ಸ್ ಭಾಗ– **I** ಪತ್ರಿಕೆ–**3** ಎಸ್.ಎ.ಎಸ್. ಭಾಗ– **II** ಪತ್ರಿಕೆ–**1** (ಪುಸ್ತಕಗಳಿಲ್ಲದೆ) ಟ್ರೆಜರಿ ಅಕೌಂಟ್ಸ್ ಭಾಗ– **II** ಪತ್ರಿಕೆ–**1** (ಎಲಿಮೆಂಟರಿ ಬುಕ್ ಕೀಪಿಂಗ್)
3	ಬುಧವಾರ	**05–03–2014**	ಬೆಳಿಗ್ಗೆ 10.00 ರಿಂದ 12.00 ಗಂಟೆ ಮೇಲಿನಂತೆ ಮೇಲಿನಂತೆ ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ ಮೇಲಿನಂತೆ ಮೇಲಿನಂತೆ	ಎಸ್.ಎ.ಎಸ್. ಭಾಗ– **II** ಪತ್ರಿಕೆ–**2** ಎಲೆಕ್ಟ್ರಿಸಿಟಿ ಲಾಸ್ ಪರೀಕ್ಷೆ ಪತ್ರಿಕೆ–**1** ಟ್ರೆಜರಿ ಅಕೌಂಟ್ಸ್ ಭಾಗ– **II** ಪತ್ರಿಕೆ–**2** (ಪುಸ್ತಕಗಳಿಲ್ಲದೆ) ಎಲೆಕ್ಟ್ರಿಸಿಟಿ ಲಾಸ್ ಪರೀಕ್ಷೆ ಪತ್ರಿಕೆ–**2** ಎಸ್.ಎ.ಎಸ್ ಭಾಗ– **II** ಪತ್ರಿಕೆ–**3** ಟ್ರೆಜರಿ ಅಕೌಂಟ್ಸ್ ಭಾಗ– **II** ಪತ್ರಿಕೆ–**3**
4	ಗುರುವಾರ	**06–03–2014**	ಬೆಳಿಗ್ಗೆ 10.00 ರಿಂದ 12.00 ಗಂಟೆ ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ	ಎಸ್.ಎ.ಎಸ್. ಭಾಗ– **III** ಪತ್ರಿಕೆ–**1** ಎಸ್.ಎ.ಎಸ್. ಭಾಗ– **III** ಪತ್ರಿಕೆ–**2** (ಪುಸ್ತಕಗಳಿಲ್ಲದೆ)
5	ಶುಕ್ರವಾರ	**07–03–2014**	ಬೆಳಿಗ್ಗೆ 10.00 ರಿಂದ 12.00 ಗಂಟೆ ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ ಮೇಲಿನಂತೆ	ಎಸ್.ಎ.ಎಸ್. ಭಾಗ– **III** ಪತ್ರಿಕೆ–**3** ಎಸ್.ಎ.ಎಸ್. ಭಾಗ– **III** ಪತ್ರಿಕೆ–**4** (ಪುಸ್ತಕಗಳಿಲ್ಲದೆ) ಎಲೆಕ್ಟ್ರಿಸಿಟಿ(ಆಡಿಟ್ ಅಂಡ್ ಅಕೌಂಟ್ಸ್) ಲಾಸ್ ಲೋಯರ್ ಪರೀಕ್ಷೆ
6	ಶನಿವಾರ	**08–03–2014**	ಬೆಳಿಗ್ಗೆ 10.00 ರಿಂದ 12.00 ಗಂಟೆ ಮೇಲಿನಂತೆ ಮೇಲಿನಂತೆ ಮೇಲಿನಂತೆ ಮೇಲಿನಂತೆ ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ ಮೇಲಿನಂತೆ	ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ ಹೈಯರ್ ಪರೀಕ್ಷೆ ಭಾಗ– **I** ಎಸ್.ಎ.ಎಸ್ ಭಾಗ– **III** ಪತ್ರಿಕೆ–**5** ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ– **I** ಪತ್ರಿಕೆ–**1** ಇಂಡಿಯನ್ ಕಾಂಟ್ರಾಕ್ಟ್ ಆಕ್ಟ್ ಕರ್ನಾಟಕ ಲೋಕಸೇವಾ ಆಯೋಗ ಮ್ಯಾನ್ಯುಯಲ್ ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ– **I** ಪತ್ರಿಕೆ–**2** ಕರ್ನಾಟಕ ಲೋಕಸೇವಾ ಆಯೋಗ ರಿಕ್ರೂಟ್‌ಮೆಂಟ್ ರೂಲ್ಸ್

ಆರ್. ವೆಂಕಟೇಶ್ ಕುಮಾರ್,
ಪರೀಕ್ಷಾ ನಿಯಂತ್ರಕರು,
ಕರ್ನಾಟಕ ಲೋಕಸೇವಾ ಆಯೋಗ.

PR.146
S.C.500

ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ
ಅಧಿಸೂಚನೆ

ದಿನಾಂಕ: 05–12–2013

ವಿಷಯ: ಶೀಘ್ರಲಿಪಿಗಾರರ ಹುದ್ದೆಗಳಿಗೆ ನೇರ ನೇಮಕಾತಿ

ಓದಲಾಗಿದೆ: 1. ಈ ನ್ಯಾಯಾಲಯದ ಅಧಿಸೂಚನೆ ಸಂಖ್ಯೆ: 02:2013, ದಿನಾಂಕ: 22–10–2013
2. ಕಛೇರಿ ಟಿಪ್ಪಣಿ ದಿನಾಂಕ: 05–12–2013 ಹಾಗೂ ಅದರ ಮೇಲಿನ ಆದೇಶ

ಬಾಗಲಕೋಟ ಜಿಲ್ಲಾ ನ್ಯಾಯಾಲಯದ ಅಧಿಸೂಚನೆ ಸಂಖ್ಯೆ; 02:2013, ದಿನಾಂಕ: 22–10–2013 ರಡಿಯಲ್ಲಿ ವಿವಿಧ ಮೀಸಲಾತಿಗಳಡಿಯಲ್ಲಿ 11 ಶೀಘ್ರಲಿಪಿಗಾರರ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:18–11–2013ರ ಬದಲಾಗಿ ಸದರಿ ಅರ್ಜಿಗಳನ್ನು ಸ್ವೀಕರಿಸಲು ದಿನಾಂಕ: 06–01–2014ರವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಗಿದೆ. ಉಳಿದಂತೆ ಅಧಿಸೂಚನೆ ಸಂಖ್ಯೆ: 02:2013ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಬಾಲಕೃಷ್ಣ ಬಿ.
ಜಿಲ್ಲಾ ಮತ್ತು ಸತ್ರ
ನ್ಯಾಯಾಲಯ, ಬಾಗಲಕೋಟೆ

PR.144.
S.C.5

ಕಂದಾಯ ಇಲಾಖೆ

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ – 573 201

ಸಂಖ್ಯೆ:ಗ್ರಾ.ಲೆ.ಸಿಬ್ಬಂದಿ-121/2012-13, ದಿನಾಂಕ:11-11-2013

:: ಅಧಿಕೃತ ಜ್ಞಾಪನ ::

ವಿಷಯ:- ಹಾಸನ ಜಿಲ್ಲೆಯಲ್ಲಿ 2013 ನೇ ಸಾಲಿನಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ 46 ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು- ನೇಮಕಾತಿಯನ್ನು ರದ್ದುಗೊಳಿಸಿರುವ ಕುರಿತು.

ಉಲ್ಲೇಖ:-
1. ಸರ್ಕಾರದ ಪತ್ರದ ಸಂಖ್ಯೆ: ಕಂ.ಇ. 33 ಬಿಎಸ್‌ಸಿ 2012, ದಿನಾಂಕ: 21/06/2012.
2. ಈ ಕಛೇರಿಯ ಸಮ ಸಂಖ್ಯೆ ಅಧಿಸೂಚನೆ ದಿನಾಂಕ: 28.01.2013
3. ಈ ಕಛೇರಿಯ ಸಮಸಂಖ್ಯೆ ಪ್ರಕಟಣೆ ದಿನಾಂಕ 20.05.2013
4. ಈ ಕಛೇರಿಯ ತಿಳುವಳಿಕೆ ಪತ್ರ ದಿನಾಂಕ 26-9-2013
5. ಈ ಕಛೇರಿಯ ಅಂತಿಮ ತಿಳುವಳಿಕೆ ಪತ್ರ ದಿನಾಂಕ 15-10-2013
6. ಈ ಕಛೇರಿಯ ತಿಳುವಳಿಕೆ ಪತ್ರ ದಿನಾಂಕ 25-10-2013

ಹಾಸನ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ 2013 ನೇ ಸಾಲಿನಲ್ಲಿ ಖಾಲಿ ಇರುವ 46 ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿಮಾಡಲು ಮೆರಿಟ್ ಆಧಾರದ ಮೇಲೆ ಆಯಾ ಮೀಸಲಾತಿ ಪ್ರವರ್ಗಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಂತಿಮ ಆಯ್ಕೆ ಪಟ್ಟಿಯನ್ನು ಹಾಗೂ ಕಾಯ್ದಿರಿಸಿರುವ ಪಟ್ಟಿಯನ್ನು ಅಧಿಕೃತ ವೆಬ್‌ಸೈಟ್ http://hassan-va.kar.nic.in ನಲ್ಲಿ ಪ್ರಕಟಿಸಲಾಗಿದೆ.

ಅಂತಿಮ ಕಾಯ್ದಿರಿಸುವಿಕೆಯ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿರುವ ನಿಮ್ಮನ್ನು ದಿನಾಂಕ 05-06-2013 ರಂದು ಪರಿಶೀಲನೆ ಸಮಯದಲ್ಲಿ ನೀಡಲಾಗಿದ್ದ ಜೆರಾಕ್ಸ್ ದಾಖಲೆಗಳ ಮೂಲ ದಾಖಲೆಗಳೊಂದಿಗೆ ಕೌನ್ಸಲಿಂಗ್‌ಗೆ ಹಾಜರಾಗುವಂತೆ ಉಲ್ಲೇಖ (6) ರಂತೆ ತಿಳುವಳಿಕೆ ಪತ್ರ ನೀಡಲಾಗಿತ್ತು. ಆದರೆ ಈ ಕೆಳಕಂಡ ಅಭ್ಯರ್ಥಿಗಳು ಗೈರು ಹಾಜರಾಗಿರುತ್ತಾರೆ. ಆದುದರಿಂದ ಹಾಸನ ಜಿಲ್ಲೆಯಲ್ಲಿ 2013 ನೇ ಸಾಲಿನಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ 46 ಹುದ್ದೆಗಳನ್ನು ನೇರನೇಮಕಾತಿ ಸಂಬಂಧ ಆಯ್ಕೆಪಟ್ಟಿಯಲ್ಲಿದ್ದ ಈ ಕೆಳಕಂಡ ಮೂರು (3) ಅಭ್ಯರ್ಥಿಗಳನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈಬಿಡಲಾಗಿದೆ.

Sl	Ref. No	Cand. Name	Father Name	Address	Category Claimed	Group. Claimed	PHC Desc	Selected Category	Selected Under Group.
1	142578	KUSUMA A	ASWATHAPPA K S	NO 78, 2N D MAIN, 6TH CROSS, AJGOPALNAGAR, O PEENYA 2ND STAGE, BANGALORE BANGALORE URBAN 560058	CA	KMS/	-	GM	Women
2	143772	ROOPINI K M	SHIVANANDAIAH K M	ROOPINI K M D/O SHIVANANDAIAH K M CHAPPARADAHALLI POST KUDLIGI TALUK BELLARY DIST BELLARY 583134	3B	KMS/	-	GM	KMS
3	146135	SAVITHRAMMA	RANGAPPA	SAVITHRAMMA D/O RANGAPPA, MYLANAHALLI KOPPALU, MYLANAHALLI POST, ARSIKERE TALUK, HASSAN DISTRICT. HASSAN 573103	SC	Rural/ KMS/	-	SC	Women

ಅಧ್ಯಕ್ಷರು,
ಗ್ರಾಮಲೆಕ್ಕಿಗರ ನೇಮಕಾತಿ ಪ್ರಾಧಿಕಾರ, ಹಾಗೂ
ಜಿಲ್ಲಾಧಿಕಾರಿಗಳು. ಹಾಸನ ಜಿಲ್ಲೆ. ಹಾಸನ.

PR.137
SC.10

ನಮೂನೆ-1

(ನಿಯಮ 9ನ್ನು ನೋಡಿ)

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಸಂಖ್ಯೆ: ಹಿಂವಕನಿ:ಸಿಬ್ಬಂದಿ-3:ಸಿಆರ್-38:2011-12 ದಿನಾಂಕ: 10-09-2013.

ಆಯುಕ್ತರ ಕಛೇರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಂ.16/ಡಿ. ದೇವರಾಜ ಅರಸು ಭವನ, 3ನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್‌ಬೆಡ್ ಏರಿಯಾ ವಸಂತನಗರ, ಬೆಂಗಳೂರು.

ಅಧಿಸೂಚನೆ

ಶ್ರೀ ಗುರುಪಾದಪ್ಪ ಸಿದ್ದಪ್ಪ ಭಾಸಗಿ, ಇವರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕುಂದರಗಿ, ಬೀಳಗಿ ತಾ: ಬಾಗಲಕೋಟೆ ಜಿಲ್ಲೆ ಇಲ್ಲಿ ನಿಲಯ ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರ ಹೆಸರನ್ನು "ಗುರುಪಾದಪ್ಪ ಸಿದ್ದಪ್ಪ ಬಾಸಗಿ" ಬದಲಿಗೆ **"ಗುರುಪಾದ ಸಿದ್ದಪ್ಪ ಬಿರಾದಾರ"** ಎಂಬುದಾಗಿ ಬದಲಾಯಿಸಿಕೊಳ್ಳಲು ಅನುಮತಿ ನೀಡಿದೆ.

ಆರ್.ಶಾಂತರಾಜ್, ಭಾ.ಆ.ಸೇ
ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರು.

PD.165

ಸೂಚನೆ: ಸದರಿ ಅಧಿಸೂಚನೆಯು ದಿ:03-10-2013ರಲ್ಲಿ ಪ್ರಕಟಣೆಗೊಂಡಿದ್ದು, ಸರಿಪಡಿಸಿ ಸದರಿ ನಮೂನೆ-1ನ್ನೆ ತಾಂತ್ರಿಕ ಕಾರಣಗಳಿಂದ ಮರು ಪ್ರಕಟಿಸಲಾಗಿದೆ.

ಸರ್ಕಾರಿ ಕೇಂದ್ರ ಮುದ್ರಣಾಲಯ, ಫಟಕ-2, ಬೆಂಗಳೂರು-59